# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಬುಧವಾರ, ಮೇ 19, 2021

ಸಂಪುಟ : 48 ಸಂಚಿಕೆ : 05 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com





## ಹೊಂಡದ ಸರ್ಕಲ್‌ನಲ್ಲಿ ಆಕರ್ಷಣೀಯ ಪುಷ್ಕರಣಿ

### ಇನ್ನೆರಡು ತಿಂಗಳಲ್ಲಿ ಮತ್ತೊಂದು ಪ್ರೇಕ್ಷಣೀಯ ಸ್ಥಳ ಸಿದ್ಧವಾಗುವ ನಿರೀಕ್ಷೆ

ದಾವಣಗೆರೆ, ಮೇ 18 - ನಗರದ ಹೊಂಡದ ಸರ್ಕಲ್ ಬಳಿ ಹಾಳಾಗಿ ಕಸದ ತಾಣವಾಗಿದ್ದ ಬಾವಿ, ಈಗ ಸುಂದರ ಪುಷ್ಕರಣಿಯಾಗಿ ತಲೆ ಎತ್ತುತ್ತಿದೆ. ಲಾಕ್‌ಡೌನ್ ಅಡ್ಡಿಗಳು ತೆರವಾದಲ್ಲಿ, ಇನ್ನೆರಡು ತಿಂಗಳಲ್ಲಿ ಪುಷ್ಕರಣಿ ನಿರ್ಮಾಣ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

3.10 ಕೋಟಿ ರೂ.ಗಳ ಅಂದಾಜು ವೆಚ್ಚದ ಪುಷ್ಕರಣಿಯು 26.4 x 26.4 ಮೀಟರ್ ಅಳತೆಯಲ್ಲಿ ನಿರ್ಮಾಣವಾಗುತ್ತಿದೆ. 4.75 ಮೀಟರ್ ಆಳ ಹೊಂದಿರುವ ಪುಷ್ಕರಣಿ, ಮುಂದಿನ ದಿನಗಳಲ್ಲಿ ಕಾರಂಜಿ ವ್ಯವಸ್ಥೆಯನ್ನು ಕಾಣಲಿದೆ.

88 ಕಂಬಗಳು, 80 ಬೀಮ್‌ಗಳು ಹಾಗೂ 154 ಪರಗೋಲ (ಲತಾಗೃಹ) ಗಳನ್ನು ಅಳವಡಿಸಲಾಗಿದೆ. ಪುಷ್ಕರಣಿಯ ನಾಲ್ಕು ಕಡೆಗಳಲ್ಲಿ ಗೋಪುರ ಅಳವಡಿಕೆಗೆ ಸಿದ್ಧತೆ ನಡೆದಿದೆ ಎಂದು ಸ್ಮಾರ್ಟ್ ಸಿಟಿ ಅಧಿಕಾರಿಗಳು ತಿಳಿಸಿದ್ದಾರೆ.

ನೆಲಮಂಗಲದಲ್ಲಿ ಗೋಪುರಗಳು ಸಿದ್ಧವಾಗುತ್ತಿವೆ. ಲಾಕ್‌ಡೌನ್ ಇಲ್ಲದೇ ಹೋಗಿದ್ದರೆ, ಇಷ್ಟರ ವೇಳೆಗೆ ಕಾಮಗಾರಿ ಪೂರ್ಣಗೊಂಡಿರುತ್ತಿತ್ತು ಎಂದವರು ಹೇಳಿದ್ದಾರೆ.

ಪುಷ್ಕರಣಿಗೆ ಹೊಂಡದ ಸರ್ಕಲ್‌ನಿಂದ ಬರಲು ಮಾರ್ಗ, ಲ್ಯಾಂಡ್ ಸ್ಕೇಪಿಂಗ್, ಕೂರಲು ಬೆಂಚ್‌ಗಳು ಮತ್ತು ದೀಪಗಳ ವ್ಯವಸ್ಥೆಯನ್ನು ಮುಂದಿನ ದಿನಗಳಲ್ಲಿ ಕೈಗೊಳ್ಳಲಾಗುವುದು. ಕಾಮಗಾರಿಯ ಎರಡನೇ ಹಂತದಲ್ಲಿ ನೆರಳು ಬೆಳಕಿನ ವ್ಯವಸ್ಥೆ ಮಾಡಲಾಗುವುದು. ಬಣ್ಣದ ಕಾರಂಜಿಯೂ ನಿರ್ಮಾಣವಾಗಲಿದೆ. ಐದು ವರ್ಷಗಳ ನಿರ್ವಹಣೆ ನಂತರ ಪುಷ್ಕರಣಿ ಪಾಲಿಕೆಗೆ ಹಸ್ತಾಂತರವಾಗಲಿದೆ.

ನಗರಕ್ಕೆ ಇನ್ನೊಂದು ಪ್ರೇಕ್ಷಣೀಯ ಸ್ಥಳ ಸಿಗುವ ಕುರಿತು ಮಾತನಾಡಿರುವ ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ, ಲಾಕ್‌ಡೌನ್ ಇರದಿದ್ದರೆ ಇನ್ನೆರಡು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳುವುದಿತ್ತು. ಮುಂದಿನ ದಿನಗಳಲ್ಲಿ ಪುಷ್ಕರಣಿಯನ್ನು ಮತ್ತಷ್ಟು ಸುಂದರವಾಗಿ ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದಿದ್ದಾರೆ.

## ಗ್ರಾಮ ಗೆದ್ದರೆ ದೇಶ ಗೆದ್ದಂತೆ

### ಹಳ್ಳಿಗಳಲ್ಲಿ ಸಾಂಕ್ರಾಮಿಕ ರೋಗ ಹತ್ತಿಕ್ಕಲು ಸಂಘಟಿತ ಕಾರ್ಯನಿರ್ವಹಣೆಗೆ ಪ್ರಧಾನಿ ಮೋದಿ ಕಿವಿಮಾತು

ಬೆಂಗಳೂರು, ಮೇ 18 - ಗ್ರಾಮೀಣ ಭಾಗದಲ್ಲಿ ಹರಡಿರುವ ಕೊರೊನಾ ಸಾಂಕ್ರಾಮಿಕ ರೋಗವನ್ನು ಹತ್ತಿಕ್ಕಲು ಸಂಘಟನಾತ್ಮಕವಾಗಿ ಕಾರ್ಯನಿರ್ವಹಿಸಿ ಎಂದು ಜಿಲ್ಲಾಡಳಿತಗಳಿಗೆ ಪ್ರಧಾನಿ ನರೇಂದ್ರ ಮೋದಿ ಕಿವಿಮಾತು ಹೇಳಿದ್ದಾರೆ.

ರಾಜ್ಯದ 17 ಜಿಲ್ಲಾಧಿಕಾರಿಗಳು ಸೇರಿದಂತೆ ಹೆಚ್ಚು ಸೋಂಕು ಬಾಧಕ ಜಿಲ್ಲೆಗಳ ಜಿಲ್ಲಾಡಳಿತದೊಂದಿಗೆ ವಿಡಿಯೋ ಸಂವಾದ ನಡೆಸಿ ಮಾತನಾಡಿದ ಅವರು, ಗ್ರಾಮಗಳು ಕೊರೊನಾದಿಂದ ಮುಕ್ತವಾದರೆ ದೇಶವೇ ಗೆದ್ದಂತಾಗುತ್ತದೆ ಎಂದು ಹೇಳಿದ್ದಾರೆ.

ಜನಪ್ರತಿನಿಧಿಗಳು ವಿವಿಧ ಸಮಾಜಗಳ ಸಂಘಟನೆಗಳನ್ನು ಒಗ್ಗೂಡಿಸಿ ಕೊಂಡು ಕೆಲಸ ಮಾಡಿದರಷ್ಟೇ ಸೋಂಕು ನಿವಾರಣೆ ಸಾಧ್ಯ. ಯಾವ ಗ್ರಾಮದಲ್ಲಿ ಹೆಚ್ಚು ಸೋಂಕು ಇರುತ್ತದೆಯೋ ಅಂತಹ ಪ್ರದೇಶಗಳನ್ನು ಕಂಟೈನ್‌ಮೆಂಟ್ ವಲಯ ಎಂದು ಗುರುತಿಸಿ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತರುವ ನಿಯಮಾವಳಿಗಳನ್ನು ಗ್ರಾಮೀಣ ಮಟ್ಟದಲ್ಲೂ ಯಥಾವತ್ತಾಗಿ ಪಾಲಿಸಿ ಎಂದು ಮೋದಿ ಹೇಳಿದ್ದಾರೆ.

ದಿನನಿತ್ಯ ಸೋಂಕು ಪತ್ತೆ ಹಚ್ಚುವುದು, ಸೋಂಕಿಗೆ ಒಳಗಾದವರನ್ನು ಬೇರ್ಪಡಿಸಿ, ಅವರಿಗೆ ಔಷಧೋಪಚಾರ ಮಾಡಿ. ಜನರಲ್ಲಿ ತಿಳುವಳಿಕೆ ಮೂಡಿಸಿ, ಇದು



ಕೇವಲ ಅಧಿಕಾರಿಗಳಿಂದಲೇ ಆಗುವುದಿಲ್ಲ.

ಜನಪ್ರತಿನಿಧಿಗಳು ಸ್ಥಳೀಯ ಸಂಘಟನೆಗಳ ಸಹಕಾರ ಪಡೆದು, ಇದರ ನಿರ್ಮೂಲನೆಗೆ ಶ್ರಮಿಸಿ. ಸೋಂಕಿನ ವಿರುದ್ಧ ನೀವು ಮತ್ತು ವೈದ್ಯರ ತಂಡ ಉತ್ತಮವಾಗಿ ಕೆಲಸ ಮಾಡುತ್ತಿದೆ. ಇದಕ್ಕೆ ನಾನು ಅಭಿನಂದಿಸುತ್ತೇನೆ. ನಿಮಗೆ ಒಂದು ದೊಡ್ಡ ಶಕ್ತಿ ಎದುರಾಗಿದೆ. ಅದನ್ನು ಗೆಲ್ಲಿ ಎಂದಿದ್ದಾರೆ.

ನಿಮಗೆ ಏನೆಲ್ಲಾ ಸಹಕಾರ ಬೇಕೋ, ಅದನ್ನು ನಾವು ನೀಡುತ್ತೇವೆ. ಆದರೆ ಅದನ್ನು ಸ್ಥಳಕ್ಕೆ ಮುಟ್ಟಿಸುವ ಕಾರ್ಯ ನಿಮ್ಮದು. ದೊಡ್ಡ ಪ್ರಮಾಣದಲ್ಲಿ ಲಸಿಕಾ ಅಭಿಯಾನವನ್ನು ಹಮ್ಮಿಕೊಳ್ಳಿ. ಇದರಿಂದ ಗ್ರಾಮೀಣ ಪ್ರದೇಶವನ್ನು ಕೊರೊನಾ ಸೋಂಕು ಮುಕ್ತವನ್ನಾಗಿ ಮಾಡಬಹುದು. ಪ್ರಧಾನಮಂತ್ರಿ ನಿಧಿಯಿಂದ ಪ್ರತಿ ಜಿಲ್ಲೆಯಲ್ಲೂ ಆಮ್ಲಜನಕ ಘಟಕ ಸ್ಥಾಪಿಸುವ ಭರವಸೆ ನೀಡಿದರು. ಬೇರೆ ಬೇರೆ ರಾಜ್ಯಗಳಲ್ಲಿ ಸೋಂಕು ನಿವಾರಣೆಗಾಗಿ ಕೈಗೆತ್ತಿಕೊಂಡ ಕೆಲಸಗಳನ್ನು, ನಮ್ಮ ಜಿಲ್ಲಾಡಳಿತಗಳಿಗೆ ತಿಳಿ ಹೇಳಿದ ಪ್ರಧಾನಿಯವರು, ಇವುಗಳನ್ನು ಪ್ರಯೋಗ ಮಾಡಿ ನೋಡಿ. ನಿಮ್ಮ ಜಿಲ್ಲೆಗಳಲ್ಲಿ ಸೋಂಕು ನಿಯಂತ್ರಣಕ್ಕೆ ಅಗತ್ಯ ಕ್ರಮ ಕೈಗೊಳ್ಳುವುದರ ಮೂಲಕ (3ನೇ ಪುಟಕ್ಕೆ)

### ಒಂದೇ ದಿನ 4 ಲಕ್ಷ ಸೋಂಕಿತರ ಚೇತರಿಕೆ

ನವದೆಹಲಿ, ಮೇ 18- ದೇಶದಲ್ಲಿ ಮೊದಲ ಬಾರಿಗೆ ಒಂದೇ ದಿನ ಕೊರೊನಾದಿಂದ 4 ಲಕ್ಷಕ್ಕೂ ಹೆಚ್ಚು ಜನರು ಚೇತರಿಸಿಕೊಂಡಿರುವುದಾಗಿ ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಮಂಗಳವಾರದಂದು 4.22 ಲಕ್ಷ ಜನರು ಕೊರೊನಾದಿಂದ ಚೇತರಿಸಿಕೊಂಡಿದ್ದಾರೆ. ಕಳೆದ 14 ದಿನಗಳಲ್ಲಿ ಪ್ರತಿದಿನ ಸರಾಸರಿ 3.55 ಲಕ್ಷ ಜನರು ಕೊರೊನಾದಿಂದ ಚೇತರಿಸಿಕೊಂಡಿದ್ದಾರೆ ಎಂದು ಸಚಿವಾಲಯ ಹೇಳಿದೆ. ಇದೇ ದಿನ 2.63 ಲಕ್ಷ ಹೊಸ ಕೊರೊನಾ ಸೋಂಕಿತರು ಕಂಡು ಬಂದಿದ್ದಾರೆ. ಕರ್ನಾಟಕದಲ್ಲಿ ಅತಿ ಹೆಚ್ಚಿನ 38,603 ಸೋಂಕಿತರು ಕಂಡು ಬಂದಿದ್ದಾರೆ. ನಂತರ ಸ್ಥಾನದಲ್ಲಿರುವ ತಮಿಳುನಾಡಿನಲ್ಲಿ 33,075 ಸೋಂಕಿತರು ಪತ್ತೆಯಾಗಿದ್ದಾರೆ. ದೇಶದಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ 1.63 ಲಕ್ಷ ಇಳಿಕೆಯಾಗಿ 33.53 ಲಕ್ಷಕ್ಕೆ ತಲುಪಿದೆ.

## ಕೊವಿನ್ ವೆಬ್ ತಾಣಕ್ಕೆ ಸ್ಪುಟ್ನಿಕ್ ಸೇರ್ಪಡೆ

ಹೈದರಾಬಾದ್, ಮೇ 18 – ರಷ್ಯಾದ ಕೊರೊನಾ ಲಸಿಕೆಯಾದ ಸ್ಪುಟ್ನಿಕ್ ವಿ ಅನ್ನು ಕೊವಿನ್ ವೆಬ್ ತಾಣಕ್ಕೆ ಸೇರ್ಪಡೆ ಮಾಡಲಾಗಿದೆ. ಡಾ. ರೆಡ್ಡೀಸ್ ಲ್ಯಾಬೊರೇಟರಿಯು ತನ್ನ ಉದ್ಯೋಗಿಗಳಿಗೆ ಈ ಲಸಿಕೆಯನ್ನು ನೀಡಲು ನಿರ್ಧರಿಸಿದೆ.

**ಡಾ. ರೆಡ್ಡೀಸ್ ಉದ್ಯೋಗಿ, ಕುಟುಂಬದವರಿಗೆ ಮೊದಲ ಹಂತದಲ್ಲಿ ಲಸಿಕೆ**

ಮೊದಲ ಹಂತದಲ್ಲಿ ಡಾ. ರೆಡ್ಡೀಸ್ ಲ್ಯಾಬೊರೇಟ ರಿಯ 50 ಸಾವಿರ ಉದ್ಯೋಗಿಗಳು ಹಾಗೂ ಅವರ ಕುಟುಂಬದವರಿಗೆ ಲಸಿಕೆ ನೀಡಲಾಗುವುದು. ಇದಕ್ಕಾಗಿ ಅಪೋಲೋ ಹಾಸ್ಪಿಟಲ್ಸ್ ಜೊತೆ ಕೈ ಜೋಡಿಸಲಾಗಿದೆ. ಲಸಿಕೆಯ ಬೆಲೆಯನ್ನು ಪ್ರತಿ ಡೋಸ್‌ಗೆ 1,250 ರೂ. ಎಂದು ನಿಗದಿ ಪಡಿಸಲಾಗಿದ್ದು, ಇದರಲ್ಲಿ ಲಸಿಕೆ ನೀಡುವ ಶುಲ್ಕವೂ ಸೇರಿದೆ. ಲಸಿಕೆ ಪಡೆಯಲು ಬಯಸುವವರು ನಿಯಮಗಳ ಪ್ರಕಾರ ಕೊವಿನ್ ತಾಣದಲ್ಲಿ ನೋಂದಣಿ ಮಾಡಿಸಿಕೊಳ್ಳಬೇಕಿದೆ. ಸೋಮವಾರದಂದು (3ನೇ ಪುಟಕ್ಕೆ)

## ಹೆಚ್ಚು ಜನರಿಗೆ ಎರಡಕ್ಕಿಂತ ಒಂದು ಡೋಸ್ ಲಸಿಕೆಯೇ ಉತ್ತಮ

ನವದೆಹಲಿ, ಮೇ 18 – ಕೊರೊನಾ ಲಸಿಕೆಯಾದ ಕೋವಿಶೀಲ್ಡ್‌ನ ಎರಡನೇ ಡೋಸ್ ವಿಳಂಬವಾದರೂ ಕಳವಳ ಪಡಬೇಕಿಲ್ಲ. ಆರು ತಿಂಗಳ ಒಳಗೆ ಯಾವಾಗ ಎರಡನೇ ಡೋಸ್ ಪಡೆದರೂ ಅದು ಪರಿಣಾಮಕಾರಿಯಾಗಿರುತ್ತದೆ ಎಂದು ಹಲವಾರು ಪರಿಣಿತರು ಅಭಿಪ್ರಾಯಪಟ್ಟಿದ್ದಾರೆ. ಕೇಂದ್ರ ಸರ್ಕಾರ ಕೊರೊನಾದ ಎರಡನೇ ಲಸಿಕೆಯ ಅವಧಿಯನ್ನು 12-16 ವಾರಗಳಿಗೆ ಹೆಚ್ಚಿಸಿತ್ತು. ಈ ಹಿಂದೆ ಎರಡು ಲಸಿಕೆಗಳ ನಡುವಿನ ಅಂತರ 8 ವಾರಗಳಾಗಿತ್ತು. ಇದಾದ ಮರು ದಿನವೇ ಬ್ರಿಟನ್‌ನಲ್ಲಿ ಕೊರೊನಾ ಲಸಿಕೆಯ ಎರಡನೇ ಡೋಸ್ ಅಂತರವನ್ನು 12 ವಾರಗಳಿಂದ ಎಂಟು (2ನೇ ಪುಟಕ್ಕೆ)

**ಆರು ತಿಂಗಳಲ್ಲಿ ಎರಡನೇ ಡೋಸ್ ಯಾವಾಗ ಪಡೆದರೂ ಪರಿಣಾಮಕಾರಿ**

## ದಕ್ಷಿಣ ಕ್ಷೇತ್ರಕ್ಕೆ ಲಸಿಕೆ ಕೊಟ್ಟರೆ ಅರ್ಧ ಹಣ ನೀಡಲು ಸಿದ್ಧ

ದಾವಣಗೆರೆ, ಮೇ 18- ನನ್ನ ಕ್ಷೇತ್ರದಲ್ಲಿರುವ ಸಮಾರು 2 ಲಕ್ಷ ಜನರಿಗೆ 2 ಲಕ್ಷ ಡೋಸ್ ಕೊರೊನಾ ಲಸಿಕೆ ತರಿಸಿಕೊಟ್ಟರೆ ಅದರ ಅರ್ಧದಷ್ಟು ಹಣನ್ನು ತಾವು ಕೊಡುವುದಾಗಿ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಹೇಳಿದ್ದಾರೆ.



ಶಾಸಕ ಎಸ್ಸೆಸ್

ಕೋವ್ಯಾಕ್ಸಿನ್ ಅಥವಾ ಕೋವಿಶೀಲ್ಡ್ ಯಾವುದೇ ಲಸಿಕೆ ಒಂದಕ್ಕೆ 900 ರೂ. ವೆಚ್ಚವಾಗುತ್ತದೆ ಎನ್ನಲಾಗುತ್ತದೆ. ನನ್ನ ಕ್ಷೇತ್ರದಲ್ಲಿ ಸುಮಾರು 2 ಲಕ್ಷ ಜನರಿದ್ದಾರೆ. 2 ಲಕ್ಷ ಡೋಸ್‌ಗೆ 18 ಕೋಟಿ ರೂ. ಮೊತ್ತವಾಗುತ್ತದೆ. ಅದರಲ್ಲಿ ಶೇ.50ರಷ್ಟು ಅಂದರೆ 9 ಕೋಟಿ ರೂಗಳನ್ನು ನಾನು ಕೊಡುತ್ತೇನೆ. ಸರ್ಕಾರ 9 ಕೋಟಿ ರೂ. ನೀಡಲಿ ಎಂದು ತಮ್ಮನ್ನು ಭೇಟಿ ಮಾಡಿದ ಜಿಲ್ಲಾಧಿಕಾರಿಗಳಿಗೆ ಅವರು ಹೇಳಿದರು.

ಶಾಸಕನಾಗಿ ನನ್ನ ಕ್ಷೇತ್ರದ ಮತದಾರರನ್ನು ಕಾಪಾಡುವುದು ನನ್ನ ಧರ್ಮ. ಅದಕ್ಕಾಗಿ ನಾನು ಏನು ಮಾಡಲೂ ಸಿದ್ಧನಿದ್ದೇನೆ. ಸರ್ಕಾರ ಲಸಿಕೆ ತರಿಸಿಕೊಡುವ ತಾಕತ್ತು ಪ್ರದರ್ಶಿಸಲಿ, ಅದಕ್ಕೆ ಬೇಕಾದ ಹಣ ನಾನು ಕೊಡುತ್ತೇನೆ ಎಂದು ಎಸ್ಸೆಸ್ ಸವಾಲು ಹಾಕಿದ್ದಾರೆ.

ಪ್ರಸ್ತುತ ಲಸಿಕೆ ಸಿಗದಾಗಿದೆ. ರೋಗಿಗಳಿಗೆ ಆಕ್ಸಿಜನ್ ಸಿಗುತ್ತಿಲ್ಲ. ಚಿಕಿತ್ಸೆ ನೀಡಲು ಸೂಕ್ತ ವೈದ್ಯಕೀಯ ಸಿಬ್ಬಂದಿಗಳಿಲ್ಲ. ಕೊರೊನಾ ಹತೋಟಿಗೆ ತರುವಲ್ಲಿ ಬಿಜೆಪಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಎಲ್ಲರೂ ಹಣ ಮಾಡಲು ಹೊರಟಿದ್ದಾರೆ. ಜನರ ಜೀವ ಕಾಪಾಡಲು ಯಾರೂ ತಯಾರಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಆಕ್ಸಿಜನ್ ಕೇಳಿದರೆ ಸಚಿವ ಮಾಧುಸ್ವಾಮಿ ಮುಖ್ಯಮಂತ್ರಿಗಳನ್ನು ಕೇಳಿ ಎನ್ನುತ್ತಾರೆ. ಬಡವರಿಗೆ ಜೀವನೋಪಾಯಕ್ಕಾಗಿ ಹಣ ಕೊಡಿ ಎಂದರೆ ಸಚಿವ ಈಶ್ವರಪ್ಪ ಅವರು ನಾವೇನು ನೋಟು ಪ್ರಿಂಟ್ ಮಾಡುತ್ತೇವಾ ಎನ್ನುತ್ತಾರೆ. ಸರ್ಕಾರ ನಡೆಸುವವರು ಬಾಯಲ್ಲಿ ಬರುವ ಮಾತುಗಳಾ ಇವು? ಎಂದು ಅವರು ಕಿಡಿಕಾರಿದರು.

## ಜಿಲ್ಲೆಯಲ್ಲಿ 594 ಜನರಿಗೆ ಪಾಸಿಟಿವ್, 4 ಸಾವು

ದಾವಣಗೆರೆ, ಮೇ 18- ಜಿಲ್ಲೆಯಲ್ಲಿ ಮಂಗಳವಾರ 594 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, ನಾಲ್ವರು ಮೃತಪಟ್ಟ ಬಗ್ಗೆ ವರದಿಯಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 236, ಹರಿಹರ 96, ಜಗಳೂರು 78, ಚನ್ನಗಿರಿ 61, ಹೊನ್ನಾಳಿ 101 ಹಾಗೂ ಹೊರ ಜಿಲ್ಲೆಯ 22ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. 187 ಜನರು ಗುಣಮುಖರಾಗಿದ್ದಾರೆ. ಪ್ರಸ್ತುತ ಸಕ್ರಿಯ ಪ್ರಕರಣಗಳ ಸಂಖ್ಯೆ 4447ಕ್ಕೆ ಏರಿಕೆಯಾಗಿದೆ. ಚಿಗಟೇರಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ (2ನೇ ಪುಟಕ್ಕೆ)

## ಸರ್ಕಾರಿ ಬೆಡ್ ಕೊಟ್ಟರೆ ಸಾಕು ಅದೇ ಉಪಕಾರ ಮಾಡಿದಂತೆ

ದಾವಣಗೆರೆ, ಮೇ 18- ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ಮೊದಲು ಬಾಪೂಜಿ ಆಸ್ಪತ್ರೆ, ಎಸ್‌ಎಸ್ ಹೈಟೆಕ್ ಆಸ್ಪತ್ರೆಗಳಲ್ಲಿರುವ ಸರ್ಕಾರಿ ಕೋಟಾದ ಬೆಡ್ ಬಿಟ್ಟು ಕೊಡಲಿ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ ಸವಾಲು ಹಾಕಿದ್ದಾರೆ.



ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಜನರಿಗೆ ಲಸಿಕೆ ಕೊಟ್ಟಲ್ಲಿ ಅದರ ಅರ್ಧ ವೆಚ್ಚ ಒಂಬತ್ತು ಕೋಟಿ ರೂ. ತಾವು ಭರಿಸುವುದಾಗಿ ಹೇಳಿರುವ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರ ಹೇಳಿಕೆಯನ್ನು ಟೀಕಿಸಿದ ಅವರು, ಜನರಿಗೆ ಸರ್ಕಾರ ಲಸಿಕೆ ಉಚಿತವಾಗಿ ಕೊಡುತ್ತಿದೆ. ಹೀಗಿರುವಾಗ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಲಸಿಕೆಗಾಗಿ ಹಣ ಕೊಡುವ ಅಗತ್ಯವಿಲ್ಲ. ಅದರ ಬದಲು ಸರ್ಕಾರಕ್ಕೆ ಕೊಡಬೇಕಾದ ತಮ್ಮ ಆಸ್ಪತ್ರೆಗಳ ಬೆಡ್ ಅನ್ನು ಕೊಟ್ಟರೆ ಸಾಕು, ಅದೇ ಉಪಕಾರ ಮಾಡಿದಂತಾಗುತ್ತದೆ ಎಂದು ಮನವಿ ಮಾಡಿದರು.

ಬಾಪೂಜಿ ಆಸ್ಪತ್ರೆ ಮತ್ತು ಎಸ್‌ಎಸ್ ಹೈಟೆಕ್ ಆಸ್ಪತ್ರೆಯಲ್ಲಿ ತಲಾ 850 ಬೆಡ್‌ಗಳಿವೆ. ಅದರಲ್ಲಿ ಸರ್ಕಾರ ರೂಪಿಸಿರುವ ನೀತಿಯಂತೆ ಶೇ.75ರಷ್ಟು ಬೆಡ್‌ಗಳನ್ನು ಸರ್ಕಾರಕ್ಕೆ ಬಿಟ್ಟು ಕೊಡಬೇಕಿದೆ. ಅಂತೆಯೇ ಈ ಎರಡೂ ಆಸ್ಪತ್ರೆಗಳಿಂದ 1100 ಬೆಡ್‌ಗಳನ್ನು ಕೊಡಬೇಕಾಗಿದೆ. ಬಾಪೂಜಿ ಆಸ್ಪತ್ರೆಯಲ್ಲಿ 23 ಬೆಡ್‌ಗಳು, ಎಸ್‌ಎಸ್ ಹೈಟೆಕ್ ಆಸ್ಪತ್ರೆಯಲ್ಲಿ 92 ಬೆಡ್‌ಗಳನ್ನು ಮಾತ್ರ ಕೊಡಲಾಗಿದೆ. ಉಳಿದ ಬೆಡ್‌ಗಳನ್ನು ತಮ್ಮ ಬಳಿಯೇ ಇಟ್ಟುಕೊಂಡು ಹಣ ಮಾಡುತ್ತಿದ್ದಾರೆ ಎಂದು ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

ನಗರ ಪಾಲಿಕೆ ಮಹಾಪೌರ ಎಸ್.ಟಿ. ವೀರೇಶ್ ಮಾತನಾಡಿ, ಕೊರೊನಾ ಸಂಕಷ್ಟದ ಕಾಲದಲ್ಲಿ ಜಿಲ್ಲೆಯ ಕಾಂಗ್ರೆಸ್ ಮುಖಂಡರು ರಾಜಕಾರಣ ಮಾಡಿ, ಕೊರೊನಾ ವಿರುದ್ಧ ಹೋರಾಟ ಮಾಡುತ್ತಿರುವ ವಾರಿಯರ್‌ಗಳ ಆತ್ಮಸ್ಥೈರ್ಯ ಕುಗ್ಗಿಸಬೇಡಿ ಎಂದು ಮನವಿ ಮಾಡಿದರು.

ಕೊರೊನಾ ವಾರಿಯರ್‌ಗಳು ನ್ಯಾಯಯುತ ಮತ್ತು ತಮ್ಮ ಕುಟುಂಬ, ಜೀವದ ಹಂಗನ್ನು ತೊರೆದು ಕೆಲಸ ಮಾಡುತ್ತಿದ್ದಾರೆ. ಅಂತಹ ಕೊರೊನಾ ವಾರಿಯರ್‌ಗಳಿಗೆ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಬೇಕು. ಕೊರೊನಾದಿಂದ ಪ್ರತಿಯೊಬ್ಬರೂ ಸಂಕಷ್ಟದಲ್ಲಿದ್ದಾರೆ. ಹೀಗಾಗಿ, ಕೊರೊನಾ ವಿರುದ್ಧ ಪಕ್ಷಾತೀತ, ಜಾತ್ಯತೀತವಾಗಿ ಎಲ್ಲರೂ ಒಗ್ಗೂಡಿ ಹೋರಾಟ ಮಾಡಬೇಕು. ಅದಕ್ಕೆ ಎಲ್ಲರೂ ಕೈ ಜೋಡಿಸಿ ಎಂದರು. ಬಿಜೆಪಿ ಪ್ರಧಾನ ಕಾರ್ಯದರ್ಶಿ ಜಗದೀಶ್, ಯಶವಂತ ರಾವ್ ಜಾಧವ್, ಶಿವಶಂಕರ್ ಗೋಷ್ಠಿಯಲ್ಲಿದ್ದರು.

## ಕೋವಿಡ್ ಲಕ್ಷಣಗಳು ಕಂಡರೆ ತಕ್ಷಣ ಟೆಸ್ಟ್ ಮಾಡಿಸಿಕೊಳ್ಳಿ

ದಾವಣಗೆರೆ, ಮೇ 18- ಕೋವಿಡ್ ಲಕ್ಷಣಗಳಿರುವವರು ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ,ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಇಂದಿನಿಂದ ಕೂಡಲೇ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಬೇಕೆಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದ್ದಾರೆ. ಕೋವಿಡ್ ರೋಗದ ಸೋಂಕು ಇರುವಂತಹವರು ಅಂದರೆ ಕೆಮ್ಮು, ಶೀತ (3ನೇ ಪುಟಕ್ಕೆ)

## ದೇಶ-ರಾಜ್ಯದಲ್ಲಿ ಇಳಿಕೆ, ಜಿಲ್ಲೆಯಲ್ಲಿ ಏರಿಕೆ

### ದಾವಣಗೆರೆ ಜಿಲ್ಲೆಯಲ್ಲಿ ಸರಾಸರಿ ಪ್ರಕರಣಗಳ ಸಂಖ್ಯೆ ಎರಡು ಪಟ್ಟು ಹೆಚ್ಚಳ

ದಾವಣಗೆರೆ, ಮೇ 17 - ದೇಶದಲ್ಲಿ 26 ದಿನಗಳ ನಂತರ ಪ್ರತಿನಿತ್ಯ ಕಂಡು ಬರುವ ಕೊರೊನಾ ಪ್ರಕರಣಗಳ ಸಂಖ್ಯೆ 3 ಲಕ್ಷಕ್ಕೂ ಕಡಿಮೆ ಹಂತಕ್ಕೆ ಬಂದಿದೆ. ಮಂಗಳವಾರ ದೇಶದಲ್ಲಿ 2.81 ಲಕ್ಷ ಪ್ರಕರಣಗಳು ದಾಖಲಾಗಿವೆ.

ದೇಶದಲ್ಲಿ ಕಳೆದ ವಾರದಲ್ಲಿ ಸರಾಸರಿ ಪ್ರಕರಣಗಳ ಸಂಖ್ಯೆ 3.19 ಲಕ್ಷವಾಗಿದ್ದರೆ, ಸೋಂಕಿನಿಂದ ಗುಣಮುಖರಾಗುವವರ ಸಂಖ್ಯೆ ಸರಾಸರಿ 3.66 ಲಕ್ಷದಷ್ಟಿದೆ.

ಕರ್ನಾಟಕದಲ್ಲಿ ಮೇ 9ರಂದು ವಾರದ ಸರಾಸರಿ ಪ್ರಕರಣಗಳ ಸಂಖ್ಯೆ 47 ಸಾವಿರವಾಗಿದ್ದರೆ, ಮೇ 17ರಂದು 38 ಸಾವಿರಕ್ಕೆ ಇಳಿಕೆಯಾಗಿತ್ತು. ಇದೇ ಅವಧಿಯಲ್ಲಿ ಕೊರೊನಾದಿಂದ ಚೇತರಿಸಿಕೊಳ್ಳುವವರ ಸಂಖ್ಯೆ 26 ಸಾವಿರದಿಂದ 33 ಸಾವಿರಕ್ಕೆ ಏರಿಕೆಯಾಗಿದೆ.

ಈ ನಡುವೆ, ದೇಶದಲ್ಲಿ ಕೊರೊನಾ ಪ್ರಕೋಪ ಇಳಿಮುಖವಾಗಿದೆ ಎಂಬ ಮಾತುಗಳು ಕೇಳಿ ಬರತೊಡಗಿವೆ. ಮಂಗಳವಾರ ಒಂದೇ ದಿನ 1.60 ಲಕ್ಷದಷ್ಟು ಸಕ್ರಿಯ ಪ್ರಕರಣಗಳು ಇಳಿಕೆಯಾಗಿರುವುದು ಇದರತ್ತ ಸೂಚನೆಯನ್ನು ನೀಡುತ್ತಿದೆ. ಆದರೆ, ದೇಶದೆಲ್ಲೆಡೆ ಕೊರೊನಾ ಪ್ರಕರಣಗಳು ಏಕಮುಖವಾಗಿ ಇಳಿಕೆಯಾಗುತ್ತಿಲ್ಲ. ದಾವಣಗೆರೆಯಲ್ಲಿ ಮೇ ತಿಂಗಳಲ್ಲಿ ಕಂಡು ಬರುವ ಕೊರೊನಾ ಪ್ರಕರಣಗಳ ಸಂಖ್ಯೆ ಏರುಮುಖವಾಗುತ್ತಿದೆ. ಈ ತಿಂಗಳ ಆರಂಭದಲ್ಲಿ ವಾರದ ಸರಾಸರಿ ಪ್ರಕರಣಗಳ ಸಂಖ್ಯೆ 266 ಆಗಿತ್ತು. ನಂತರ ಮೇ 9ರಂದು 400 ದಾಟಿತ್ತು. ಮೇ 17ರ ವೇಳೆಗೆ ಅದು 549ಕ್ಕೆ ತಲುಪಿದೆ. ಒಟ್ಟಾರೆ ಸರಾಸರಿ ಕಂಡು ಬರುವ ಪ್ರಕರಣಗಳ ಪ್ರಮಾಣ ತಿಂಗಳ ಆರಂಭಕ್ಕೆ ಹೋಲಿಸಿದರೆ ಈಗ ಎರಡು ಪಟ್ಟಿನಷ್ಟು ಹೆಚ್ಚಾಗಿದೆ! ಅದರಲ್ಲೂ ಮೇ 16ರಂದು ಒಂದೇ ದಿನ 1,155 ಸೋಂಕುಗಳು ಕಂಡು ಬಂದಿದ್ದು, ಇದುವರೆಗಿನ ದಾಖಲೆಯೇ ಆಗಿದೆ. ಜಿಲ್ಲೆಯಲ್ಲೀಗ 4 ಸಾವಿರದಷ್ಟು ಸಕ್ರಿಯ ಸೋಂಕು ಪ್ರಕರಣಗಳಿವೆ.

ಗ್ರಾಮೀಣ ಭಾಗದಲ್ಲಿ ಸೋಂಕುಗಳು ಹೆಚ್ಚಾಗುತ್ತಿರುವುದು ಇತ್ತೀಚಿನ (2ನೇ ಪುಟಕ್ಕೆ)



**ಸಾರ್ವಜನಿಕರಲ್ಲಿ ಇರಬೇಕಿದೆ ಎಚ್ಚರಿಕೆ**



**ಕಾಮನ ಬಿಲ್ಲು**

ದಾವಣಗೆರೆಯಲ್ಲಿ ಬಿಸಿಲು ಮಳೆ ಸುರಿದ ಪರಿಣಾಮ ಸುಂದರ ಕಾಮನ ಬಿಲ್ಲು ನಾಗರಿಕರಿಗೆ ಕಾಣ ಸಿಕ್ಕಿತ್ತು. ನೋಡಿ ಆನಂದಿಸಿದ ಜನತೆ ಮೊಬೈಲ್‌ನಲ್ಲಿ ಸೆರೆ ಹಿಡಿದು ಹಂಚಿಕೊಂಡರು. ಕೆಲವರು ಸ್ಲೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು.

# ಒಂದು ಡೋಸ್ ಲಸಿಕೆಯೇ ಉತ್ತಮ

**(1ನೇ ಪುಟದಿಂದ)** ವಾರಗಳಿಗೆ ಇಳಿಸಲಾಗಿತ್ತು. ಭಾರತದಲ್ಲಿ ಕಂಡು ಬರುತ್ತಿರುವ ಬಿ.1.617 ಕೊರೊನಾ ರೂಪಾಂತರಿಯೇ ಬ್ರಿಟನ್ ಅಂತರ ಕಡಿಮೆ ಮಾಡಲು ಕಾರಣವಾಗಿತ್ತು.

ಭಾರತದಲ್ಲಿ ಲಸಿಕೆಯ ತೀವ್ರ ಕೊರತೆ ಕಂಡು ಬರುತ್ತಿದೆ. ಈ ನಡುವೆಯೇ ಕೊರೊನಾ ಲಸಿಕೆ ಡೋಸ್‌ಗಳ ನಡುವಿನ ಅಂತರವನ್ನು ಹೆಚ್ಚಿಸಲಾಗಿದೆ. ಆದರೆ, ಲಸಿಕೆಯ ನಡುವಿನ ಅಂತರ ಹೊಂದಾಣಿಕೆ ಮಾಡಿಕೊಳ್ಳಬಹುದು ಎಂದು ರೋಗ ನಿರೋಧಕತೆಯ ಪರಿಣಿತ ಸತ್ಯಜಿತ್ ರಥ್ ಹೇಳಿದ್ದಾರೆ.

ನಾಲ್ಕು ವಾರಗಳ ನಂತರ ಎರಡನೇ ಡೋಸ್ ಅನ್ನು ಯಾವಾಗ ಬೇಕಾದರೂ ಪಡೆಯಬಹುದು. ಇದಕ್ಕೆ ಆರು ತಿಂಗಳವರೆಗೆ ಗಡುವಿರುತ್ತದೆ ಎಂದವರು ಹೇಳಿ ದ್ದಾರೆ. 2ನೇ ಡೋಸ್ ಯಾವಾಗ ಪಡೆದರೂ ಸುರಕ್ಷಿತವಾ ಗಿರುತ್ತದೆ. ಆದರೆ, ತಿಂಗಳ ವೇಳೆಗೆ ಎರಡನೇ ಡೋಸ್ ಪಡೆದರೆ ಅದರ ರೋಗ ನಿರೋಧಕತೆ ಹೆಚ್ಚಿಸುವ ಪ್ರಮಾಣ ಉತ್ತಮವಾಗಿರುತ್ತದೆ ಎಂದವರು ತಿಳಿಸಿದ್ದಾರೆ.

ಮೊದಲ ಡೋಸ್ ನಂತರ ಆರು ತಿಂಗಳ ಒಳಗೆ ಯಾವಾಗ ಎರಡನೇ ಡೋಸ್ ಪಡೆದರೂ ರೋಗ ನಿರೋಧ ಕತೆ ಹೆಚ್ಚಾಗುತ್ತದೆ. ಹೀಗಾಗಿ ನಾಲ್ಕು ವಾರಗಳಲ್ಲೇ ಲಸಿಕೆ ಪಡೆಯಬೇಕೆಂದೂನು ಇಲ್ಲ ಎಂದವರು ಸ್ಪಷ್ಟಪಡಿಸಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಪ್ರೊ. ಆಂಡ್ರ್ಯೂ ಪೊಲಾರ್ಡ್, ಅಲ್ಪಾವಧಿಯಲ್ಲಿ ಲಸಿಕೆ ಪೂರೈಕೆ ಕಡಿಮೆ ಇರುತ್ತದೆ. ಈ ಸಂದರ್ಭದಲ್ಲಿ ಕೆಲವೇ ಜನರಿಗೆ ಎರಡು ಡೋಸ್ ಲಸಿಕೆ ನೀಡುವುದಕ್ಕಿಂತ, ಹೆಚ್ಚು ಜನರಿಗೆ ಒಂದು ಡೋಸ್ ಲಸಿಕೆ ನೀಡುವುದೇ ಪರಿಣಾಮಕಾರಿ ಎಂದಿದ್ದಾರೆ.

ಬ್ರಿಟನ್‌ನಲ್ಲಿ ಕೋವಿಶೀಲ್ಡ್ ಲಸಿಕೆಯ ಅವಧಿ ಇಳಿಕೆ ಮಾಡಿರುವುದರ ಬಗ್ಗೆ ಪ್ರತಿಕ್ರಿಯಿಸಿರುವ ಇನ್ನೋರ್ವ ಪರಿಣಿತರಾದ ವಿನೀತ ಬಾಲ್, ವಾಸ್ತವಿಕತೆಗಳ ಆಧಾರದ ಮೇಲೆ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ. ರೂಪಾಂತರಿ ಎದುರಿಸಲು ಈ ನಿರ್ಧಾರ ನೆರವಾಗುತ್ತದೆ ಎಂಬುದನ್ನು ಸ್ಪಷ್ಟವಾಗಿ ಹೇಳಲು ಸಾಧ್ಯವಾಗದು ಎಂದಿದ್ದಾರೆ.

ಲಸಿಕೆ ಪಡೆದು ದಿನ ಕಳೆಯುತ್ತಾ ಸಾಗಿದಂತೆ ರೋಗ ನಿರೋಧಕತೆ ಕಡಿಮೆಯಾಗುತ್ತದೆ. ಆದರೆ, 12-16 ವಾರಗಳಲ್ಲೇ ರೋಗ ನಿರೋಧಕತೆ ಕುಸಿಯುವುದಿಲ್ಲ. 12-16 ವಾರಗಳ ನಂತರವೇ ಕೋವಿಶೀಲ್ಡ್‌ನ ಎರಡನೇ ಡೋಸ್ ನೀಡಬೇಕು ಎಂದು ಹಲವಾರು ಪ್ರಯೋಗ ಗಳಿಂದ ಮಾಹಿತಿಯೂ ದೊರೆತಿದೆ ಎಂದೂ ಅವರು ಹೇಳಿದ್ದಾರೆ. ದಿ ಲ್ಯಾನ್ಸೆಟ್ ಫೆಬ್ರವರಿಯಲ್ಲಿ ಪ್ರಕಟಿಸಿದ್ದ ಅಧ್ಯಯನದ ಪ್ರಕಾರ, ಕೋವಿಶೀಲ್ಡ್ ಲಸಿಕೆಯ ಎರಡು ಡೋಸ್‌ಗಳ ನಡುವಿನ ಅಂತರ ಮೂರು ತಿಂಗಳಿದ್ದರೆ ಹೆಚ್ಚು ಪರಿಣಾಮಕಾರಿ.

# ಹೊನ್ನಾಳಿ : ಆಕ್ಸಿಜನ್ ಕೇಂದ್ರಕ್ಕೆ ಗುದ್ದಲಿ ಪೂಜೆ

## ಸದರನ್‌ನಿಂದ ಹೊನ್ನಾಳಿ ಆಸ್ಪತ್ರೆಗೆ 40 ಆಕ್ಸಿಜನ್ ಸಿಲಿಂಡರ್ ಪಡೆದ ಎಂಪಿಆರ್

ಹರಿಹರ, ಮೇ 18-ಯಾವುದೇ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿಗಳು ತಮ್ಮ ಆಸ್ಪತ್ರೆಗೆ ಬೇಕಾಗಿರುವ ಅವಶ್ಯಕತೆಗಳ ಬಗ್ಗೆ ಮಾಹಿತಿ ಹೊಂದಿದ್ದಲ್ಲಿ ಸೂಕ್ತ ಸಮಯಕ್ಕೆ ಅದನ್ನು ಪೂರೈಸುವ ಮೂಲಕ ಜೀವ ಉಳಿಸಬಹುದಾಗಿದೆ ಎಂದು ಶಾಸಕ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ಹೊನ್ನಾಳಿ ಸಾರ್ವಜನಿಕ ಆಸ್ಪತ್ರೆಯ 40 ಕೊರೊನಾ ರೋಗಿಗಳಿಗೆ ತುರ್ತು ಆಕ್ಸಿಜನ್ ಸಿಲಿಂಡರ್ ಅವಶ್ಯಕತೆ ಇದೆ ಎಂದು ಅಲ್ಲಿನ ವೈದ್ಯಾಧಿಕಾರಿ ಚಂದ್ರಪ್ಪ ತಿಳಿಸಿದ ಕಾರಣ, ಆಕ್ಸಿಜನ್ ಸಿಲಿಂಡರ್‌ಗಾಗಿ ನಗರದ ಸದರನ್ ಗ್ಯಾಸ್ ಲಿ. ಕಂಪೆನಿಗೆ ತಾಲ್ಲೂಕು ಅಧಿಕಾರಿಗಳ ತಂಡದೊಂದಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅವರು ಪತ್ರಕರ್ತರೊಂದಿಗೆ ಮಾತನಾಡಿದರು.



ಹೊನ್ನಾಳಿ ವೈದ್ಯಾಧಿಕಾರಿ ಚಂದ್ರಪ್ಪ ಅವರು ರಾತ್ರಿ ಆಕ್ಸಿಜನ್ ಕೊರತೆ ಇರುವ ಬಗ್ಗೆ ನನ್ನ ಗಮನಕ್ಕೆ ತಂದಿದ್ದು, ತಕ್ಷಣ ಜಿಲ್ಲಾಧಿಕಾರಿಗಳ ಬಳಿ ಚರ್ಚಿಸಿ, ಪ್ರೊಬೇಷನರಿ ಉಪ ವಿಭಾಗಾಧಿಕಾರಿ ವೀರೇಶ್ ಕುಮಾರ್, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಅವರ ಗಮನಕ್ಕೆ ತಂದು, ಇಂದು ಬೆಳಿಗ್ಗೆ 10 ಹಾಗೂ ಈಗ 20 ಆಕ್ಸಿಜನ್ ಸಿಲಿಂಡರ್ ತೆಗೆದುಕೊಂಡು ಹೋಗುತ್ತಿದ್ದೇನೆ ಎಂದು ಹೇಳಿದರು.

ಬೆಳಿಗ್ಗೆ ಆಕ್ಸಿಜನ್ ಕಳುಹಿಸುವಲ್ಲಿ ಸ್ವಲ್ಪ ವ್ಯತ್ಯಾಸವಾಗಿದ್ದರೂ 40 ರೋಗಿಗಳ ಚಿಕಿತ್ಸೆಯಲ್ಲಿ ಸಮಸ್ಯೆ ಎದುರಾಗಿ, ಸಾವು-ನೋವುಗಳಾಗುವ ಹಂತಕ್ಕೆ ಹೋಗುತ್ತಿತ್ತು ಎಂದರು.

ಹೊನ್ನಾಳಿಯಲ್ಲಿ ಹೊಸದಾಗಿ ಆಕ್ಸಿಜನ್ ಕೇಂದ್ರವನ್ನು ತುರ್ತಾಗಿ ತೆರೆಯುವುದಕ್ಕೆ ಈಗಾಗಲೇ ಕೆಸಿಎಸ್‌ಆರ್ ವಿಪತ್ತು ನಿರ್ವಹಣಾ ಪರಿಹಾರ ನಿಧಿಯಡಿಯಲ್ಲಿ ಮೊದಲ ಹಂತಕ್ಕೆ 65.65 ಲಕ್ಷ ರೂಪಾಯಿ ಬಿಡುಗಡೆಯಾಗಿದ್ದು, ನಾಳೆಯೇ ಗುದ್ದಲಿ ಪೂಜೆ ನೆರವೇರಲಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪ್ರೊಬೇಷನರಿ ಉಪ ವಿಭಾಗಧಿಕಾರಿ ವೀರೇಶ್ ಕುಮಾರ್, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಪಿಎಸ್‌ಐ ಸುನೀಲ್ ಬಸವರಾಜ್ ತೆಲಿ ಇತರರಿದ್ದರು.

## ಹರಪನಹಳ್ಳಿ ತಾ.ಗೆ ಕಾಲಿಟ್ಟ ಬ್ಲಾಕ್ ಫಂಗಸ್ : ಆತಂಕ

ಹರಪನಹಳ್ಳಿ, ಮೇ 18- ಕೊರೊನಾ 2ನೇ ಅಲೆಯ ಜೊತೆಗೆ ತಾಲ್ಲೂಕಿಗೆ ಕಾಲಿಟ್ಟ ಬ್ಲಾಕ್ ಫಂಗಸ್ ಸೋಂಕಿನ (ಕಪ್ಪು ಶಿಲೀಂಧ್ರ) ಲಕ್ಷಣಗಳು ಯುವಕನಲ್ಲಿ ಕಾಣಿಸಿಕೊಂಡಿದ್ದು ಆತಂಕ ಸೃಷ್ಟಿಯಾಗಿದೆ.

ತಾಲ್ಲೂಕಿನ ನೀಲಗುಂದ ಗ್ರಾಮದ 45 ವರ್ಷದ ಯುವಕನಲ್ಲಿ ಬ್ಲಾಕ್ ಫಂಗಸ್ ಸೋಂಕಿನ ಲಕ್ಷಣಗಳು ಕಂಡುಬಂದಿವೆ. ಈ ವ್ಯಕ್ತಿ ಕೊರೊನಾ ಸೋಂಕಿನಿಂದ ಏಪ್ರಿಲ್ 30 ರಂದು ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ದಾಖಲಾಗಿ 12 ದಿನಗಳ ಚಿಕಿತ್ಸೆ ಪಡೆಯುತ್ತಿದ್ದ.

ಕೊರೊನಾದಿಂದ ಗುಣಮುಖರಾಗಿ ಇನ್ನೇನು ಎರಡು ದಿನಗಳಲ್ಲಿ ಮನೆಗೆ ತೆರಳಿ ಕ್ವಾರಂಟೈನ್ ಆಗಬೇಕು ಎನ್ನುವಷ್ಟರಲ್ಲಿ ಆ ವ್ಯಕ್ತಿಯ ಕಣ್ಣುಗಳಲ್ಲಿ ಭಾವು (ಊತ), ತಲೆ ನೋವು ಕಾಣಿಸಿಕೊಂಡಿದ್ದು, ಈ ಬಗ್ಗೆ ವೈದ್ಯರು ಪರೀಕ್ಷೆ ನಡೆಸಿ, ಸ್ಕ್ಯಾನ್ ಮಾಡಿದ್ದು, ಹೆಚ್ಚಿನ ಚಿಕಿತ್ಸೆಗೆ ಹುಬ್ಬಳ್ಳಿ ಆಸ್ಪತ್ರೆಗೆ ಕಳುಹಿಸಿದ್ದಾರೆ.

ಲ್ಯಾಬ್ ಗೆ ಪರೀಕ್ಷೆಗಾಗಿ ಕಳುಹಿಸಲಾಗಿದ್ದು, ವರದಿ ಬಂದ ನಂತರ ದೃಢವಾಗಲಿದೆ ಎಂದು ತಿಳಿದುಬಂದಿದೆ. ಅವಳಿ ಜಿಲ್ಲೆಗಳಲ್ಲಿ ಈ ಸೋಂಕು ಮೊದಲ ಬಾರಿಗೆ ಕಾಣಿಸಿಕೊಂಡಿದ್ದು, ಜನರಲ್ಲಿ ಆತಂಕ ಶುರುವಾಗಿದೆ.

## ವೈರಸ್ ತಡೆಯಲು ರಾಸಾಯನಿಕ ಔಷಧಿ ಸಿಂಪರಣೆ




**ಜಗಳೂರು**

ಜಗಳೂರು, ಮೇ 18- ಕೋವಿಡ್-19 ಸೋಂಕು ನಿಯಂತ್ರಣಕ್ಕೆ ಪಟ್ಟಣ ಪಂಚಾಯಿತಿ ವತಿಯಿಂದ ಪಟ್ಟಣದ 18 ವಾರ್ಡ್‌ಗಳಲ್ಲಿ ರಾಸಾಯನಿಕ ಕ್ರಿಮಿನಾಶಕವನ್ನು ಅಗ್ನಿಶಾಮಕ ಠಾಣೆ ವಾಹನಗಳಿಂದ ಸಿಂಪರಣೆ ಮಾಡಲಾಗುತ್ತಿದೆ.

ಸಾಂಕ್ರಾಮಿಕ ರೋಗ ಹರಡದಂತೆ ಮುಂಜಾಗ್ರತೆಯಾಗಿ ಈ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಪಟ್ಟಣ ಪಂಚಾಯತಿ ಅಧ್ಯಕ್ಷ ಆರ್. ತಿಪ್ಪೇಸ್ವಾಮಿ ಸಾರ್ವಜನಿಕರಿಗೆ ತಿಳಿಸಿದರು. ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳು ಮಾತನಾಡಿದರು. ಈ ಸಂದರ್ಭದಲ್ಲಿ ಅಗ್ನಿಶಾಮಕ ಠಾಣೆಯ ಠಾಣಾಧಿಕಾರಿ ಹನುಮಂತರಾಯ, ಪಂಚಾಯ್ತಿ ಕಂದಾಯ ನಿರೀಕ್ಷಕ ಸಂತೋಷ್ ಕುಮಾರ್, ಆರೋಗ್ಯ ನಿರೀಕ್ಷಕ ಕಿಫಾಯತ್ ಮತ್ತಿತರರು ಇದ್ದರು.

## ಕಮಂಡಲಗುಂದಿ ದೇವಸ್ಥಾನದಲ್ಲಿ ಕಳವು



ಜಗಳೂರು, ಮೇ 18- ತಾಲ್ಲೂಕಿನ ಕಮಂಡಲಗುಂದಿ ಗ್ರಾಮದ ಶ್ರೀ ಆಂಜನೇಯ ದೇವಸ್ಥಾನದ ಬಾಗಿಲು ಮುರಿದು ಸುಮಾರು ಐದು ಲಕ್ಷ ರೂ. ಬೆಲೆಯ ಆಂಜನೇಯ ಸ್ವಾಮಿಯ ಬೆಳ್ಳಿಯ ಮುಖವಾಡವನ್ನು ಕಳ್ಳತನ ಮಾಡಲಾಗಿದೆ.

ಕಳ್ಳರು ದೇವಸ್ಥಾನದಲ್ಲಿನ ಸಿಸಿ ಕ್ಯಾಮರಾಗಳನ್ನೂ ಸಹ ಕಿತ್ತುಕೊಂಡು ಪರಾರಿಯಾಗಿದ್ದಾರೆ.

## ಗ್ರಾ.ಪಂ ಗಳಿಗೆ ಇಂದು ಶಾಸಕ ರಾಮಪ್ಪ ಭೇಟಿ

ಶಾಸಕ ಎಸ್.ರಾಮಪ್ಪ ಅವರು ಇಂದು ಬೆಳಿಗ್ಗೆ 11 ರಿಂದ ಯಲವಟ್ಟಿ, ಕುಂಬಳೂರು, ಜಿಗಳಿ, ಹಾಲಿವಾಣ ಮತ್ತು ಕುಣೆಬೆಳಕೆರೆ ಗ್ರಾ.ಪಂ.ಗಳಿಗೆ ಭೇಟಿ ನೀಡಿ, ಹಳ್ಳಿಗಳಲ್ಲಿ ಕೊರೊನಾ ನಿಯಂತ್ರಿಸುವ ಕುರಿತು ಜಾಗೃತಿ ಸಭೆಗಳನ್ನು ನಡೆಸಲಿದ್ದಾರೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ ತಿಳಿಸಿದ್ದಾರೆ.

## ಆಕ್ಸಿಜನ್ ಕಾನ್ಸಂಟ್ರೇಟರ್ ಕೊಡುಗೆ



**ರಾಣೇಬೆನ್ನೂರು**

ರಾಣೇಬೆನ್ನೂರು, ಮೇ 18- ಕೊರೊನಾಗೆ ಸಂಬಂಧಿಸಿದ ಸರ್ಕಾರದ ಕಾರ್ಯಕ್ರಮಗಳ ಜೊತೆ ಕೈಜೋಡಿಸಿ ಜನರ ರಕ್ಷಣೆಗೆ ಸಹಕಾರ ನೀಡುತ್ತಿರುವ ದೇವರಗುಡ್ಡ ಮಾಲತೇಶ ದೇವಸ್ಥಾನದ ಪ್ರಧಾನ ಅರ್ಚಕ ಸಂತೋಷ ಭಟ್ ಅವರ ಕಾರ್ಯ ಶ್ಲಾಘನೀಯವಾದುದು ಎಂದು ಶಾಸಕ ಅರುಣಕುಮಾರ ಪೂಜಾರ ಹೇಳಿದರು.

ಕಳೆದ ಲಾಕ್‌ಡೌನ್ ಸಂದರ್ಭದಲ್ಲಿ ಬಡವರಿಗೆ ದಿನಸಿ ಕಿಟ್‌ಗಳನ್ನು ನೀಡಿದ್ದರು. ನಂತರ ಗ್ರಾಮೀಣ ಜನರ ಸಂಕಷ್ಟಕ್ಕೆ ಸ್ಪಂದಿಸಲು ಒಂದು ಆಂಬ್ಯುಲೆನ್ಸ್ ತಂದಿದ್ದರು. ಅದನ್ನು ನಗರದ ಆರೋಗ್ಯ ಇಲಾಖೆಯ ಸುಪರ್ದಿಗೆ ಕೊಡಲಾಗಿದೆ. ಇಂದು ಆಕ್ಸಿಜನ್ ಕಾನ್ಸಂಟ್ರೇಟರ್ ಕೊಟ್ಟಿದ್ದಾರೆ ಎಂದು ಶಾಸಕರು ಹೇಳಿದರು.

ಗ್ರಾಮದ ಆರೋಗ್ಯ ಕೇಂದ್ರಕ್ಕೆ 10 ಲೀಟರ್ ನ ಎರಡು ಆಕ್ಸಿಜನ್ ಕಾನ್ಸಂಟ್ರೇಟರ್ ನೀಡಿ ಅವರು ಮಾತನಾಡಿದರು.

ಗ್ರಾ.ಪಂ. ಅಧ್ಯಕ್ಷ ಮಾಲತೇಶ ನಾಯರ್, ಡಾ. ದಾದಾಪೀರ್, ಪಿಡಿಓ ಬಸವರಾಜ್, ಪವನ ದೇಸಾಯಿ, ಪವನ ಮಲ್ಲಾಡದ, ಚಿಕ್ಕಪ್ಪ ಐಗಳ, ಉದಯ, ದೇವೇಂದ್ರಪ್ಪ ಮತ್ತಿತರರಿದ್ದರು.

### ಸಚಿವರಿಂದ ಆಹಾರ ಕಿಟ್

ಕೋವಿಡ್ ತಡೆಗಟ್ಟಲು ಸರ್ಕಾರ ಮಾಡಿರುವ ಲಾಕ್‌ಡೌನ್‌ನಿಂದಾಗಿ ಕಷ್ಟ ಪಡುತ್ತಿರುವ ತಾಲ್ಲೂಕಿನ ಕಡು ಬಡವರಿಗೆ ರೇಷ್ಮೆ ಖಾತೆ ಸಚಿವ ಆರ್. ಶಂಕರ್ 5 ಕೆ.ಜಿ. ಅಕ್ಕಿ, 1 ಕೆ.ಜಿ. ಸಕ್ಕರೆ ಹಾಗೂ ನೂರು ಗ್ರಾಂ ಚಹಾಪುಡಿ ತುಂಬಿದ ಕಿಟ್‌ಗಳನ್ನು ಇಂದು ವಿತರಿಸಿದರು.

### ಶಾಸಕರಿಂದ ಹೋಳಿಗೆ ಊಟ

ಬಸವ ಜಯಂತಿ ಪ್ರಯುಕ್ತ ನಗರದ ಆರಕ್ಷಕರಿಗೆ, ಪೌರಕಾರ್ಮಿಕರಿಗೆ ಇಲ್ಲಿನ ನಗರಸಭೆ ಗುಡ್ಡದ ಬಸಪ್ಪ ಸ್ಮಾರಕ ಟೌನ್‌ಹಾಲ್‌ನಲ್ಲಿ ಶಾಸಕ ಅರುಣ್ ಕುಮಾರ್ ಪೂಜಾರ್ ಹೋಳಿಗೆ ಊಟ ಏರ್ಪಡಿಸಿದ್ದರು. ನಗರಸಭೆಯ ಹಲವು ಸದಸ್ಯರು, ಬಿಜೆಪಿ ನಾಯಕರು, ಪತ್ರಕರ್ತರು ಭಾಗವಹಿಸಿದ್ದರು.

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

ಕಲ್ಯಾಣ ಮಂಟಪಕ್ಕೆ, ಅಪಾರ್ಟ್‌ಮೆಂಟ್‌ಗೆ, ಕಾಲೇಜಿಗೆ ಯೋಗ್ಯ ಸ್ಥಳ ಮಾರಾಟಕ್ಕಿದೆ
110x210 (22 ಸಾವಿರ ಚದರ ಅಡಿ) ಮಹಾಲಕ್ಷ್ಮಿ ಲೇಔಟ್‌ನಲ್ಲಿ ಮೂರು ಕಡೆ ರಸ್ತೆ, ಹೊಂದಿರುವ ಯೋಗ್ಯ ಸ್ಥಳ ಮಾರಾಟಕ್ಕಿದೆ. ಸಂಪರ್ಕಿಸಿ
ಐಗೂರು ವಿಜಯಕುಮಾರ್ : 99457 02495
ಸುರೇಶ್ : 95911 60520

**ಜಮೀನು ಖರೀದಿಗೆ ಬೇಕಾಗಿದೆ**
(ನೀರಾವರಿ, ಬೆದ್ದಲು, ಅಡಿಕೆ, ತೆಂಗಿನ ತೋಟ)
ಕಿರಣ್ ಬೂಸ್ನೂರ್
98440-63409, 97315-63409
(ಜಮೀನು ಕೊಳ್ಳುವುದಕ್ಕೆ ವಿಚಾರಿಸಿ)

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ, ಡಾಲರ್ಸ್ ಕಾಲೋನಿಯಲ್ಲಿ,
30×55 East, 30×50 West, 30×50 North, 40×60 North, 50×80 North, 40 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

॥ ಜೈ ಶ್ರೀಮನ್ನಾರಾಯಣ ॥
ವಿಕಾಸ ತರಂಗಿಣಿ, ದಾವಣಗೆರೆ ಸ್ಫೂರ್ತಿ ಸೇವಾ ಟ್ರಸ್ಟ್
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
ಶ್ರೀ ಶಿವದೇವಾನಂದ ಸ್ವಾಮಿಗಳು, ಶಾಸ್ತ್ರೀಹಳ್ಳಿ, ಇವರ ಆರಾಧನಾ ಪ್ರಯುಕ್ತ ಪ್ರಸಾದ ವಿತರಣೆ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಸೈಟುಗಳು ಮಾರಾಟಕ್ಕಿವೆ**
ಬಾಲಾಜಿ ಲೇಔಟ್ (120 ಅಡಿ ರಿಂಗ್ ರೋಡ್ ಪಕ್ಕ) ಉತ್ತರ 30x40 ದಕ್ಷಿಣ 30x58, ಶಾಮನೂರು ಬ್ರಿಡ್ಜ್ (ಬೈಪಾಸ್) 110x190 ಉತ್ತರ 110x210 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ :
ಐಗೂರು ವಿಜಯಕುಮಾರ್ : 99457 02495
ಸುರೇಶ್ : 95911 60520

**Oxygen Concentrator for Rent**
Contact :
70192 20661

**ಜಮೀನು ಕೊಳ್ಳಲು ಬೇಕಾಗಿರುತ್ತದೆ**
(Immediate Registration)
74112-50447

**Sale**
Just Idli-My Kitchen
(Complete Set up)
Good running - on line Food Parcel & Catering Service in Davanagere. only Interested Persons contact
7676100154

**LADY ACCOUNTANT**
ಬೇಕಾಗಿದ್ದಾರೆ
Contact :
94485 62862

**ಗೋಲ್ಡನ್ ಲ್ಯಾಂಪ್ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ಧರನ್ನು, ರೋಗಿಗಳನ್ನು ನೋಡಿಕೊಳ್ಳಲು ಹೋಂ (ನರ್ಸ್) ಮತ್ತು ಆಯಾಗಳನ್ನು ಕಳಿಸುತ್ತೇವೆ. ಮತ್ತು ಮನೆ ಕೆಲಸ, ಚಿಕ್ಕ ಮಕ್ಕಳನ್ನು ನೋಡಿಕೊಳ್ಳಲು ತುರ್ತಾಗಿ ಯುವಕ-ಯುವತಿಯರು ಬೇಕಾಗಿದ್ದಾರೆ. ಊಟ, ವಸತಿ ವ್ಯವಸ್ಥೆ ಇದೆ. ಸಂಪರ್ಕಿಸಿರಿ :
89047 35301, 98447 17618

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ.
(ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಸ್ಟಾರ್ ಸ್ಪೋರ್ಟ್ಸ್ ದಾವಣಗೆರೆ.**
ಎಲ್ಲಾ ತರಹದ ಕ್ರೀಡಾ ಸಾಮಗ್ರಿಗಳನ್ನು ಮನೆಗೆ ತಲುಪಿಸುವ ವ್ಯವಸ್ಥೆ ಇದೆ. ಕೇರಂ, ಚೆಸ್, ಲುಡೋ, ಯೋಗ ಮ್ಯಾಟ್, ಯೋಗ ಬ್ರಿಕ್, ಜಿಮ್ ಬಾಲ್, ಶಟಲ್ ರ್‍ಯಾಕೆಟ್, ಕಾಕ್, ಮಾವೀಸ್-350, ಕ್ರಿಕೆಟ್ ಬ್ಯಾಟ್, ಬಾಲ್ Etc.,
8310154195, 8310469873

**Puppies for Sale**
Doberman
(30 days)
Quality breed puppies available.
Contact : 77956 74154

**Wanted**
Order Booking Boys (PUC)
Delivery Boys
Contact during 7 to 9 morning only
A.K.TRADERS
Ashirwad, Bapuji Hospital Road, Davangere 577004

## ಗಾಯನ ಸ್ಪರ್ಧೆ

ದಾವಣಗೆರೆ, ಮೇ 18- ಸುಗಮ ಸಂಗೀತ ಪರಿಷತ್ ಜಿಲ್ಲಾ ಘಟಕದಿಂದ ಜಿಲ್ಲಾ ವ್ಯಾಪ್ತಿಯಲ್ಲಿ ವ್ಯಾಟ್ಸಾಪ್‌ನಲ್ಲಿ ಗೀತಗಾಯನ ಸ್ಪರ್ಧೆಗೆ ಆಹ್ವಾನಿಸಲಾಗಿದೆ ಎಂದು ಪರಿಷತ್ತಿನ ಅಧ್ಯಕ್ಷ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

ಸಂಗೀತಾಸಕ್ತರು ಭಾವಗೀತೆ, ಭಕ್ತಿಗೀತೆ, ಜನಪದ ಗೀತೆ, ಚಲನಚಿತ್ರಗೀತೆ ಹೀಗೆ ಯಾವುದಾದರೂ ಒಂದು ಹಾಡನ್ನು ಮೊಬೈಲ್‌ನಲ್ಲಿ ವಿಡಿಯೋ ಚಿತ್ರೀಕರಿಸಿ ಇದೇ ದಿನಾಂಕ 20 ರೊಳಗೆ 9538732777 ಈ ವ್ಯಾಟ್ಸಾಪ್ ನಂಬರ್‌ಗೆ ಕಳಿಸಬೇಕು ಎಂದು ಪರಿಷತ್ತಿನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿದುಷಿ ಸಂಗೀತ ರಾಘವೇಂದ್ರ ತಿಳಿಸಿದ್ದಾರೆ.

ವಿವರಕ್ಕೆ 9901122728 ಸಂಖ್ಯೆಗೆ ಸಂಪರ್ಕಿಸಬಹುದು.

## ಕೊರೊನಾಗೆ ಚಿಕಿತ್ಸೆ ಪಡೆಯಲು ಲತಾ ಕರೆ



ಹರಪನಹಳ್ಳಿ, ಮೇ 18- ತಾಲ್ಲೂಕಿನ ತಾಳೇದಹಳ್ಳಿ ಒಂದು ಸಣ್ಣ ಗ್ರಾಮವಾಗಿದ್ದು, ಬಹುತೇಕ ಹಿಂದುಳಿದ ವರ್ಗ ಮತ್ತು ಕೃಷಿ ಕೂಲಿ ಕಾರ್ಮಿಕರನ್ನು ಹೊಂದಿದೆ.

ಅಂದಾಜು 150-160 ಮನೆಗಳನ್ನು ಹೊಂದಿರುವ ಈ ಗ್ರಾಮ ಅಕ್ಷರಶಃ ಕೋವಿಡ್ ನಿಂದ ಹೊತ್ತಿ ಉರಿಯುತ್ತಿದೆ, ನಿನ್ನೆ ತಾನೆ ಕಾಂಗ್ರೆಸ್ ಕಾರ್ಯಕರ್ತ ಹನುಮಂತಪ್ಪ ಬ್ಲಾಕ್ ಫಂಗಸ್ ಗೆ ಒಳಗಾಗಿ ಅಸುನೀಗಿದ್ದು ದುರಂತ. ಇಡೀ ಗ್ರಾಮ ಭಯಕ್ಕೆ ಒಳಗಾಗಿದ್ದು, ಗ್ರಾಮದ ಜನರ ಜೊತೆ ನಿರಂತರ ಸಂಪರ್ಕದಲ್ಲಿರುವ ರಾಜ್ಯ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯ ದರ್ಶಿ ಎಂ.ಪಿ. ಲತಾ ಮಲ್ಲಿಕಾರ್ಜುನ್, ಇಂದು ಇಡೀ ಗ್ರಾಮಕ್ಕೆ ಫುಡ್ ಕಿಟ್ (ಆಹಾರ ಸಾಮಗ್ರಿ) ಗಳನ್ನು ವಿತರಿಸಲು ಕ್ರಮ ಕೈಗೊಂಡಿರುತ್ತಾರೆ.


ಯುವ ಕಾಂಗ್ರೆಸ್ ಅಧ್ಯಕ್ಷ ಮತ್ತೂರು ಬಸವರಾಜ್ ಫುಡ್‌ಕಿಟ್‌ಗಳನ್ನು ಲತಾ ಅವರ ಮಾರ್ಗದರ್ಶನದ ಹಿನ್ನೆಲೆಯಲ್ಲಿ ವಿತರಿಸಿ, ಗ್ರಾಮದ ಜನರೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಮಾತನಾಡಿಸಿದರು. ಜನರು ಪ್ರಾರಂಭಿಕ ಹಂತದಲ್ಲೇ ಸರಿಯಾದ ಚಿಕಿತ್ಸೆ ಪಡೆಯಬೇಕು. ಜ್ವರ ಬಂದ 1 ರಿಂದ 5 ದಿನದ ಒಳಗಡೆ ಚಿಕಿತ್ಸೆ ಪಡೆಯದೇ ಹೋದರೆ, ಬೆಡ್ ಮತ್ತು ವೆಂಟಿಲೇಟರ್ ಬೇಕಾಗುತ್ತೆ ಎಂದರು.

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ಸರಸ್ವತಿ ನಗರದ ಚಿಕ್ಕನಹಳ್ಳಿ ಬಡಾವಣೆ ವಾಸಿ
ಸಾವಿತ್ರಮ್ಮ ಮತ್ತು ಮಕ್ಕಳು ಮಾಡುವ ವಿಜ್ಞಾಪನೆಗಳು.
ದಿನಾಂಕ 11.05.2021ನೇ ಮಂಗಳವಾರ
ಶ್ರೀ ಪಿ. ಮಹಾದೇವಪ್ಪ, ಆನವೇರಿ
(ನಿ. ವಾಣಿಜ್ಯ ತೆರಿಗೆ ಇಲಾಖೆ, ದಾವಣಗೆರೆ)
ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಶಿವಗಣಾರಾಧನೆಯನ್ನು**
ದಿ. : 19.05.2021ನೇ ಬುಧವಾರ ಬೆಳಿಗ್ಗೆ 12:00 ಗಂಟೆಗೆ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ಬಯಸುವ
ಇಂತಿ ದುಃಖತಪ್ತರು
ಶ್ರೀಮತಿ ಸಾವಿತ್ರಮ್ಮ ಮತ್ತು ಮಕ್ಕಳು, ಅಳಿಯಂದಿರು, ಮತ್ತು ಮೊಮ್ಮಕ್ಕಳು, ಬಂಧು-ಮಿತ್ರರು.
99454 23263

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 18.05.2021ರಂದು ಅಕಾಲಿಕವಾಗಿ ನಿಧನರಾದ ದಾವಣಗೆರೆಯ ಶಿವಲಿಂಗೇಶ್ವರ ಟ್ರೇಡರ್ಸ್‌ಮಾಲೀಕರೂ, ನಮ್ಮ ಆತ್ಮೀಯ ಒಡನಾಡಿಗಳೂ ಆಗಿದ್ದ
**ಶ್ರೀ ಎಸ್.ಜಿ. ವಾಗೀಶ್ವರಯ್ಯ**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.
✦ ಜಿ.ಬಿ. ರುದ್ರಮುನಿ
✦ ಆದರ್ಶ್ ಆರ್. ಜಗಲೂರು
**ಜಗಲೂರು ರೈಸ್ ಮಿಲ್**
ಭಾರತ್ ಕಾಲೋನಿ, ದಾವಣಗೆರೆ.

**ಕಳೆದಿದೆ**
ದಿನಾಂಕ 17.5.2021ರ ಸೋಮವಾರ ಬೆಳಿಗ್ಗೆ 9 ಗಂಟೆ ಸುಮಾರಿಗೆ ಎಂ.ಸಿ. ಕಾಲೋನಿ 'ಬಿ' ಬ್ಲಾಕ್‌ನಲ್ಲಿ **9916242588 Vodafone V.I. / 9902446538 Airtel ಸಿಮ್‌ಗಳನ್ನು ಹೊಂದಿರುವ ಸ್ಯಾಮ್‌ಸಂಗ್ ಮೊಬೈಲ್** ಕಳೆದಿದೆ. ಸಿಕ್ಕವರು ಈ ಕೆಳಕಂಡ ವಿಳಾಸಕ್ಕೆ ತಲುಪಿಸಿ **'ಸೂಕ್ತ ಗೌರವ ಬಹುಮಾನ ಪಡೆಯಿರಿ'**. ಶ್ರೀ ಸಿಗಂಧೂರೇಶ್ವರಿ ದೇವಿಯ ಅಭಯ ಹಸ್ತ ಹಾಗೂ ಕಳ್ಳತನ ಪತ್ತೆ ಹಚ್ಚುವ ಸಾಧನವನ್ನು ಮೊಬೈಲ್‌ಗೆ ಅಳವಡಿಸಲಾಗಿದೆ. ಸಿಕ್ಕವರು ತಲುಪಿಸದೇ ಇದ್ದರೆ, ಮುಂದೆ ಆಗಬಹುದಾದ ವಿಘ್ನಗಳನ್ನು ಆಹ್ವಾನಿಸಲು ಸಿದ್ಧರಾಗಿರಿ.
*ಮೊಬೈಲ್ ತಲುಪಿಸಬೇಕಾದ ವಿಳಾಸ :*
**ವೀರೇಶ್, ಕಾವಲುಗಾರ, ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ ನರಸರಾಜ ರಸ್ತೆ, ದಾವಣಗೆರೆ. (ಹಳೇಊರು, ಶಾಂತಿ ಟಾಕೀಸ್ ಹತ್ತಿರ)**

**ಎನ್.ಎ. ರವೀಂದ್ರ ನಿಧನ**



ದಾವಣಗೆರೆ ವಿದ್ಯಾನಗರ ವಾಸಿ, ಎಂ.ಸಿ.ಸಿ. 'ಎ' ಬ್ಲಾಕ್ ಸಂಜೀವಿನಿ ಮೆಡಿಕಲ್ ಎಂಪೋರಿಯಂ ಮಾಲೀಕರಾದ **ಶ್ರೀ ಎನ್.ಎ. ರವೀಂದ್ರ** (42) ಅವರು ದಿನಾಂಕ 18.05.2021ರ ಮಂಗಳವಾರ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ದಿನಾಂಕ 18.05.2021ರ ಮಂಗಳವಾರ ನಡಕಲಪುರದಲ್ಲಿ ನೆರವೇರಿತು.
ಇಂತಿ ದುಃಖತಪ್ತರು,
ಧರ್ಮಪತ್ನಿ : ಶ್ರೀಮತಿ ಶ್ವೇತ ಮತ್ತು ಮಕ್ಕಳು
ತಾಯಿ : ಶ್ರೀಮತಿ ಸುಂದರಮ್ಮ
ಅಣ್ಣ-ಅತ್ತಿಗೆ : ಶ್ರೀಮತಿ ಶ್ರೀದೇವಿ ಮತ್ತು ರಾಘುವೇಂದ್ರ, ಎನ್.ಎ.
ಶ್ರೀಮತಿ ಮಮತ ಮತ್ತು ನಾಗಭೂಷಣ ಮತ್ತು ಮಕ್ಕಳು
ಶ್ರೀಮತಿ ಗೀತಾ ಮತ್ತು ಜಗದೀಶ್ ಮತ್ತು ಮಕ್ಕಳು, ಚಿಗಟೇರಿ.
ನಡಕಲಪುರ ಗ್ರಾಮ, ಮಳವಳ್ಳಿ ತಾ॥ ಮಂಡ್ಯ ಜಿಲ್ಲೆ ಹಾಗೂ ಬಂಧು-ಮಿತ್ರರು.

## ರಾಜ್ಯದಲ್ಲಿ ಇಳಿಕೆ, ಜಿಲ್ಲೆಯಲ್ಲಿ ಏರಿಕೆ

**(1ನೇ ಪುಟದಿಂದ)** ಬೆಳವಣಿಗೆಯಾಗಿದೆ.

ಸಾಂಕ್ರಾಮಿಕ ರೋಗ ಮೂರು ಹಂತಗಳನ್ನು ಹೊಂದಿರುತ್ತದೆ. ಮೊದಲ ಹಂತದಲ್ಲಿ ಏರುಮುಖವಾ ದರೆ, ಎರಡನೇ ಹಂತದಲ್ಲಿ ಸ್ಥಿರವಾಗುತ್ತದೆ ಹಾಗೂ ಮೂರನೇ ಹಂತದಲ್ಲಿ ಇಳಿಯುತ್ತದೆ ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಜಿ.ಡಿ. ರಾಘವನ್ ತಿಳಿಸಿದ್ದಾರೆ.

ಸೋಂಕಿನ ಆರಂಭ ಅನಿರೀಕ್ಷಿತವಾಗಿ ರುತ್ತದೆ. ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ನಿರೀಕ್ಷೆಗೂ ಹೆಚ್ಚಿನ ಸಂಖ್ಯೆಯಲ್ಲಿ ಕಾಯಿಲೆ ಲಕ್ಷಣ ಕಾಣುತ್ತದೆ. ಈ ಹಂತದಲ್ಲಿ ಸರ್ಕಾರಗಳ ಮಾರ್ಗಸೂಚಿ ಅನ್ವಯ ಕ್ರಮ ತೆಗೆದುಕೊಂಡರೆ ಸ್ಥಿರತೆ ಬಂದು, ನಂತರ ಇಳಿಮುಖವಾಗುತ್ತದೆ ಎಂದವರು ಹೇಳಿದ್ದಾರೆ.

ಸಮುದಾಯದ ಸಹಭಾಗಿತ್ವದ ಕೊರತೆಯಿಂದ ಎರಡನೇ ಅಲೆ ಎದುರಾಗಿದೆ. ಈ ಹಂತದದಲ್ಲಿ ಜಿಲ್ಲೆಯಿಂದ ಜಿಲ್ಲೆಗೆ ಕೊರೊನಾ ಹರಡುವಿಕೆಯಲ್ಲಿ ವ್ಯತ್ಯಾಸವಿದೆ ಎಂದವರು ತಿಳಿಸಿದ್ದಾರೆ.

ಸೋಂಕು ಕಡಿಮೆ ಬಂದರೂ ಸುರಕ್ಷಿತ ಎಂದು ಭಾವಿಸಬಾರದು. ಸುಪ್ತ ಪ್ರಕರಣಗಳು ಸಮುದಾಯದಲ್ಲಿರುತ್ತವೆ. ಹೀಗಾಗಿ ರ್‍ಯಾಂಡಮ್ ಸರ್ವೆ ಮುಖಾಂತರ ಆರ್.ಎ.ಟಿ. ಪರೀಕ್ಷೆ ಮಾಡಿ ಪಾಸಿಟಿವ್ ಇರುವವರನ್ನು ಪ್ರತ್ಯೇಕಿಸಿ ಚಿಕಿತ್ಸೆಗೆ ಒಳಪಡಿಸುವಂತೆ ಆರೋಗ್ಯ ಇಲಾಖೆಗೆ ಜಿಲ್ಲಾಧಿಕಾರಿ ಹಾಗೂ ಜಿ.ಪಂ. ಸಿಇಒ ಸೂಚನೆ ಕೊಟ್ಟಿದ್ದಾರೆ.

## ವರದಕ್ಷಿಣೆ ಸಾವು : ದೂರು ದಾಖಲು

**ಕೊಟ್ಟೂರು**

ಕೊಟ್ಟೂರು, ಮೇ 18- ವರದಕ್ಷಿಣೆ ಕಿರುಕುಳ ನೀಡಿ ಮಹಿಳೆಯನ್ನು ಕೊಲೆ ಮಾಡಿರುವುದಾಗಿ ಮೃತ ಮಹಿಳೆಯ ಪೋಷಕರು ಪೊಲೀಸರಿಗೆ ದೂರು ನೀಡಿದ್ದಾರೆ. ದಾವಣಗೆರೆಯ ಯಲ್ಲಮ್ಮ ನಗರದ ಪೂಜಾಳನ್ನು ಆರು ವರ್ಷದ ಹಿಂದೆ ಕೊಟ್ಟೂರಿನ ಶಿವರಾಜ್ ಎಂಬಾತನೊಂದಿಗೆ ವಿವಾಹ ಮಾಡಿಕೊಡಲಾಗಿತ್ತು. ಇವರಿಗೆ ಐದು ವರ್ಷದ ಹೆಣ್ಣು ಮಗು ಹಾಗೂ ಮೂರು ವರ್ಷದ ಗಂಡು ಮಗು ಇದ್ದು, ಶಿವರಾಜ್ ಹೆಂಡತಿ ಪೂಜಾಳಿಗೆ ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡುತ್ತಿದ್ದ ಎಂದು ಆರೋಪಿಸಲಾಗಿದೆ.

ಗಂಡ ಶಿವರಾಜ್, ಮಾವ ಚಿತ್ರಗಾರ ರಾಮಣ್ಣ, ಅತ್ತೆ ರಾಜೇಶ್ವರಿ ಮೂವರು ಸೇರಿ ಕೊಲೆ ಮಾಡಿದ್ದಾರೆ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ಆರೋಪಿಸಿದ್ದಾರೆ.

ಸ್ಥಳಕ್ಕೆ ತಹಶೀಲ್ದಾರ್ ಜಿ. ಅನಿಲ್‌ಕುಮಾರ್, ಡಿವೈಎಸ್ಪಿ ಹಾಲಮೂರ್ತಿ ರಾವ್, ಸಿಪಿಐ ದೊಡ್ಡಪ್ಪ, ಪಿಎಸ್‌ಐ ನಾಗಪ್ಪ ಭೇಟಿ ನೀಡಿ ಪರಿಶೀಲಿಸಿದರು.

# ಹರಿಹರ ಸಾರ್ವಜನಿಕ ಆಸ್ಪತ್ರೆಯಲ್ಲಿ ಬೆಡ್ ಸಿಗದೆ ರೋಗಿಗಳ ಪರದಾಟ

**ಚಿದಾನಂದ್ ಎಂ. ಕಂಚಿಕೇರಿ**

ಕಳೆದ ಬಾರಿ ಕೊರೊನಾ ಬಂದು ಹೋಗಿದ್ದರೂ, ಹರಿಹರ ತಾಲ್ಲೂಕು ಆಸ್ಪತ್ರೆಯಲ್ಲಿ ಯಾವುದೇ ಸೌಲಭ್ಯಗಳನ್ನು ಹೆಚ್ಚಿಸದಿರುವುದು ಸಾರ್ವಜನಿಕರನ್ನು ಆತಂಕಕ್ಕೀಡು ಮಾಡಿದೆ.

ಸರ್ಕಾರದ ಇತ್ತೀಚಿನ ಆದೇಶದಂತೆ ತಾಲ್ಲೂಕು ಆಸ್ಪತ್ರೆಗೆ 100 ಬೆಡ್‌ನ ಸೌಲಭ್ಯದ ಆದೇಶವಾಗಿದ್ದರೂ ಸಹ ಈಗಿನ ಮಾನದಂಡದ ಪ್ರಕಾರ ಅದಕ್ಕೆ ಪೂರಕವಾದ ಮೂಲಭೂತ ಸೌಕರ್ಯಗಳ ಕೊರತೆ ಇದೆ. ವೆಂಟಿಲೇಟರ್ ಸೌಲಭ್ಯವಿದ್ದರೂ ಸಹ ಅದರ ನಿರ್ವಹಣೆಗಾಗಿ 9 ಸಿಬ್ಬಂದಿಗಳ ಅಗತ್ಯವಿದೆ. ಸಿಬ್ಬಂದಿ ಕೊರತೆಯಿಂದ ವೆಂಟಿಲೇಟರ್ ನಿರ್ವಹಣೆ ಸಾಧ್ಯವಾಗುತ್ತಿಲ್ಲ. ಸದ್ಯಕ್ಕೆ ಇರುವುದು 50 ಬೆಡ್‌ಗಳು ಮಾತ್ರ. ತಾಲ್ಲೂಕಿನ ಜನಸಂಖ್ಯೆ 2.10 ಲಕ್ಷಕ್ಕೂ ಹೆಚ್ಚು ಇದೆ. ತಾಲ್ಲೂಕಿನಲ್ಲಿ ಸದ್ಯ ಸಕ್ರಿಯ ಕೊರೊನಾ ರೋಗಿಗಳ ಪ್ರಕರಣ 405 ಇದೆ. ಗುತ್ತೂರು ಕೋವಿಡ್ ಕೇರ್ ಸೆಂಟರ್‌ನಲ್ಲಿ 63 ರೋಗಿಗಳಿಗೆ ಮತ್ತು ಸಾರ್ವಜನಿಕ ಆಸ್ಪತ್ರೆಯಲ್ಲಿ 56 ಕ್ಕೂ ಹೆಚ್ಚು ರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ. ಉಳಿದ ಸೋಂಕಿತರಿಗೆ ಹೋಂ ಐಸೋಲೇಷನ್‌ನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಈಗಾಗಲೇ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ 50 ಕ್ಕೂ ಹೆಚ್ಚು ರೋಗಿಗಳಿಗೆ ಊಟ, ಔಷಧಿ, ಆಕ್ಸಿಜನ್ ನೀಡಲಾಗಿದೆ. ಇವರಿಗೆ 14 ದಿನಗಳ ಚಿಕಿತ್ಸೆ ನೀಡಬೇಕಾಗಿರುತ್ತದೆ. ನಿನ್ನೆ ಒಂದೇ ದಿನ 127 ಕೊರೊನಾ ಪ್ರಕರಣಗಳು ದೃಢಪಟ್ಟಿದ್ದು, ಚಿಕಿತ್ಸೆಗೆಂದು ಹರಿಹರದ ಆಸ್ಪತ್ರೆಗೆ ದಾಖಲಾದರೆ ಇವರಿಗೆ ಚಿಕಿತ್ಸೆ ಎಲ್ಲಿ ಕೊಡಲಾಗುವುದೋ ಗೊತ್ತಿಲ್ಲ.

ಎಮರ್ಜೆನ್ಸಿ ವಾರ್ಡ್‌ನಲ್ಲೇ ಕೊರೊನಾ ರೋಗಿಗಳಿಗೆ ಚಿಕಿತ್ಸೆಗೆ ದಾಖಲು ಮಾಡಿ, ಆಕ್ಸಿಜನ್ ನೀಡಲಾಗಿದೆ. ರೋಗಿಗಳ ಕುಟುಂಬ ಸದಸ್ಯರೊಬ್ಬರು ಹೇಳುವ ಪ್ರಕಾರ ಕಳೆದ ಮೂರು ದಿನಗಳಿಂದ ಆಕ್ಸಿಜನ್ ನೀಡಿರಲಿಲ್ಲ. ಇಂದು ನಾವೇ ಹೊರಗಡೆಯಿಂದ ಆಕ್ಸಿಜನ್ ಮಿಷಿನ್ ತೆಗೆದುಕೊಂಡು ಬಂದೆವು. ನಂತರದಲ್ಲಿ ಇಲ್ಲಿನ ವೈದ್ಯರು ಆಕ್ಸಿಜನ್ ನೀಡಿದರು ಎಂದು ಹೇಳುತ್ತಾರೆ.

ಇನ್ನು ಆಸ್ಪತ್ರೆಯ ಆವರಣದಲ್ಲಿ ಕೊರೊನಾ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳ ಜೊತೆಗೆ ಅವರ ಕುಟುಂಬದ ಸದಸ್ಯರು ಕೂಡ ಕೋವಿಡ್ ಸೆಂಟರ್‌ನಲ್ಲಿ ಠಿಕಾಣಿ ಹೂಡಿದ್ದು, ರೋಗಿಗಳಾರು? ಕುಟುಂಬದ ಸದಸ್ಯರಾರು ಒಂದೂ ತಿಳಿಯದಾಗಿದೆ. ಕೊರೊನಾ ಭಯವಿಲ್ಲದೆ, ಸಾರ್ವಜನಿಕರ ಓಡಾಟ ನಿರಾತಂಕವಾಗಿಯೇ ಇದೆ.

ಇದನ್ನು ಗಮನಿಸಿದ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಆಸ್ಪತ್ರೆಗೆ ಭೇಟಿ ನೀಡಿ ವೈದ್ಯಕೀಯ ಅಧಿಕಾರಿ ಡಾ. ಹನುಮನಾಯ್ಕ್ ಜೊತೆಗೆ ಮಾತನಾಡಿ, ಸಾರ್ವಜನಿಕರನ್ನು ಹೊರಗಡೆ ಕಳಿಸಲು ಸೂಚಿಸಿದರು. ಸಾರ್ವಜನಿಕರು ಇದಕ್ಕೆ ಬಗ್ಗದಿದ್ದಾಗ ಸಿಪಿಐ ಸತೀಶ್ ಕುಮಾರ್ ಅವರಿಗೆ ಕರೆ ಮಾಡಿ, ಪೊಲೀಸ್ ಸಿಬ್ಬಂದಿಗಳನ್ನು ನೇಮಿಸಿ, ಸಾರ್ವಜನಿಕರನ್ನು ನಿಯಂತ್ರಿಸುವ ವ್ಯವಸ್ಥೆ ಮಾಡುವಂತೆ ತಿಳಿಸಿದರು.





- ➡ ಕೊರೊನಾ ಪೀಡಿತ ಮಗುವಿಗೆ ಬೆಡ್ ಸಿಗದೆ ಖಾಸಗಿ ಆಸ್ಪತ್ರೆಗೆ ಕಳುಹಿಸಿದ ವೈದ್ಯರು.
- ➡ ಆಕ್ಸಿಜನ್ ಯಂತ್ರ ಸಿಗದ ಕಾರಣ ಎಮರ್ಜೆನ್ಸಿ ವಾರ್ಡ್‌ನಲ್ಲಿದ್ದ ಕೊರೊನಾ ಮಹಿಳಾ ರೋಗಿಗೆ ಮೂರು ದಿನದ ನಂತರ ಆಕ್ಸಿಜನ್ ನೀಡಿಕೆ.
- ➡ ಆಸ್ಪತ್ರೆ ಆವರಣದಲ್ಲಿ ಹಾಗೂ ರೋಗಿಗಳ ಬಳಿ ಕುಟುಂಬದ ಸದಸ್ಯರ ಠಿಕಾಣಿ.

ಮಗುವಿಗೆ ಕೊರೊನಾ ಬಂದಿದೆ. ಚಿಕಿತ್ಸೆ ಕೊಡಿಸಲು ಬೆಡ್ ಸಿಗುತ್ತಿಲ್ಲ. ಬೆಡ್ ಕೊಡಿಸಿ ಎಂದು ಆಸ್ಪತ್ರೆಗೆ ಭೇಟಿ ನೀಡಿದ್ದ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪನವರ ಬಳಿ ತಾಯಿಯೊಬ್ಬಳು ತನ್ನ ಅಳಲನ್ನು ತೋಡಿಕೊಂಡಾಗ, ಇಲ್ಲಿ ಬೆಡ್ ಖಾಲಿ ಇರದ ಕಾರಣ ಬೇರೆ ಆಸ್ಪತ್ರೆಗೆ ದಾಖಲಿಸುವಂತೆ ಹೇಳಿ ಕಳುಹಿಸಿದ ಘಟನೆಯೂ ನಡೆಯಿತು.

ಇದೇ ವೇಳೆ ರಕ್ತ ತಪಾಸಣೆ ಸಿಬ್ಬಂದಿಗಳಾದ ಅಶ್ರಫ್ ಅಲಿ ಮತ್ತು ವಿಜಯಕುಮಾರ್ ಮಾತನಾಡಿ, ಪ್ರತಿದಿನ ಇಲ್ಲಿ ಸುಮಾರು 80 ಮಂದಿಗೆ ಗಂಟಲು ದ್ರವ ಪರೀಕ್ಷೆ ನಡೆಯುತ್ತಿದ್ದು, ಈ ಡಾಟಾ ಎಂಟ್ರಿ ಮಾಡುವುದಕ್ಕೆ ಒಬ್ಬ ಸಿಬ್ಬಂದಿಯ ಅವಶ್ಯಕತೆ ಇದ್ದು, ಕಲ್ಪಿಸಿಕೊಡುವಂತೆ ಮನವಿ ಮಾಡಿದರು. ಈ ಕ್ಷಣದಲ್ಲಿ ಡಾಟಾ ಎಂಟ್ರಿ ಮಾಡುವುದಕ್ಕೆ ಸಿಬ್ಬಂದಿಗಳನ್ನು ನೇಮಕ ಮಾಡಲಾಗುತ್ತದೆ ಎಂದು ಡಾ. ಹನುಮನಾಯ್ಕ್ ಹೇಳಿದರು.

ತಾಲ್ಲೂಕಿನ ಮಲೇಬೆನ್ನೂರು ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೈದ್ಯರಿಗೆ ಪಾಸಿಟಿವ್ ಬಂದಿರುವುದರಿಂದ ಅಲ್ಲಿನ ರೋಗಿಗಳಿಗೆ ಚಿಕಿತ್ಸೆ ನೀಡುವಲ್ಲಿ ಸಮಸ್ಯೆ ಎದುರಾಗುತ್ತಿದೆ. ಸಾರ್ವಜನಿಕರು ಸರ್ಕಾರದ ಕೋವಿಡ್ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವ ಮೂಲಕ ತಮ್ಮ ಆರೋಗ್ಯದ ಕಡೆ ನಿಗಾವಹಿಸುವಂತೆ ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಚಂದ್ರಮೋಹನ್ ತಿಳಿಸಿದ್ದಾರೆ.

> "ಇಲ್ಲಿನ ಆಸ್ಪತ್ರೆ ಆವರಣಕ್ಕೆ ನಾನು ಭೇಟಿ ನೀಡಿದ ಸಮಯದಲ್ಲಿ ಕೆಲವು ಕೊರೊನಾ ರೋಗಿಗಳ ಜೊತೆಗೆ ಅವರ ಕುಟುಂಬದ ಸದಸ್ಯರು ಇಲ್ಲೇ ಇರುವುದು ಕಂಡುಬಂದಿದ್ದು, ಇದನ್ನು ಹತೋಟಿಗೆ ತರಲು ಸಿಪಿಐ ಸತೀಶ್ ಕುಮಾರ್ ಅವರಿಗೆ ಸೂಚನೆ ನೀಡಲಾಗಿದೆ. ಕೊರೊನಾ ಇಷ್ಟು ವೇಗವಾಗಿ ಹಬ್ಬಲು ಜನರ ನಿರ್ಲಕ್ಷ್ಯವೇ ಕಾರಣವಾಗಿದೆ. ನಾಗರಿಕರು ಅರಿಯದ ಹೊರತು ಅಧಿಕಾರಿಗಳು ಎಷ್ಟೇ ಶ್ರಮವಹಿಸಿದರೂ ಫಲ ನೀಡುವುದಿಲ್ಲ.
>
> **- ಕೆ.ಬಿ. ರಾಮಚಂದ್ರಪ್ಪ, ತಹಶೀಲ್ದಾರ್**

> "ನಗರದಲ್ಲಿನ ಸಾರ್ವಜನಿಕ ಆಸ್ಪತ್ರೆಯಲ್ಲಿ 50 ಬೆಡ್ ವ್ಯವಸ್ಥೆಯಿದ್ದು, ನಾವು ಇಲ್ಲಿನ ಕೊರೊನಾ ರೋಗಿಗಳಿಗೆ ಉತ್ತಮ ಗುಣಮಟ್ಟದ ಚಿಕಿತ್ಸೆ, ಊಟ, ಔಷಧಿ, ಆಕ್ಸಿಜನ್ ವ್ಯವಸ್ಥೆ ಮಾಡಲಾಗಿದೆ. ಇನ್ನೂ14 ದಿನಗಳ ಕಾಲ ಚಿಕಿತ್ಸೆ ನೀಡಬೇಕಾಗಿದ್ದು, ಬೆಡ್ ಖಾಲಿ ಇರದ ಕಾರಣ ಬರುತ್ತಿರುವ ರೋಗಿಗಳನ್ನು ಗುತ್ತೂರು ಕೋವಿಡ್ ಕೇರ್ ಸೆಂಟರ್ ಹಾಗೂ ದಾವಣಗೆರೆ ಸಿಜೆ ಆಸ್ಪತ್ರೆಗೆ ಕಳುಹಿಸಿಕೊಡಲಾಗುತ್ತಿದೆ.
>
> **- ಡಾ. ಹನುಮನಾಯ್ಕ್, ವೈದ್ಯಾಧಿಕಾರಿ**

## ನಗರದ ತಾಜ್ ಪ್ಯಾಲೇಸ್ ಅನ್ನು ಕೋವಿಡ್ ಸೆಂಟರ್‌ನ್ನಾಗಿಸಲು ಸಭೆ



ದಾವಣಗೆರೆ, ಮೇ 18- ಕೊರೊನಾ ಸೋಂಕು ದಿನೇ ದಿನೇ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸೋಂಕಿತರಿಗೆ ಅನುಕೂಲವಾಗಲು ನಗರದ ತಾಜ್ ಪ್ಯಾಲೇಸ್ ಅನ್ನು ಕೋವಿಡ್ ಸೆಂಟರ್ ಮಾಡುವ ನಿಟ್ಟಿನಲ್ಲಿ ಇಂದು ನಡೆದ ಸಭೆಯಲ್ಲಿ ಚರ್ಚಿಸಲಾಯಿತು. ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ವಿಧಾನ ಪರಿಷತ್ತಿನ ಮಾಜಿ ಸದಸ್ಯ ಅಬ್ದುಲ್ ಜಬ್ಬಾರ್ ಸಾಬ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸೈಯದ್ ಚಾರ್ಲಿ, ಕೆ.ಚಮ್ಮನ್ ಸಾಬ್, ಜಾಕೀರ್, ಸಿರಾಜ್, ದಾದಾಪೀರ್, ಘನಿ ತಾಹೀರ್ ಮತ್ತಿತರರು ಸಭೆಯಲ್ಲಿ ಉಪಸ್ಥಿತರಿದ್ದರು.

## ಕೂಡ್ಲಿಗಿ: ಶಂಕರಾಚಾರ್ಯರ ಜಯಂತಿ



ಕೂಡ್ಲಿಗಿ, ಮೇ 18- ಹಿಂದೂ ಧರ್ಮದ ಪುನರುತ್ಥಾನದ ಪಿತಾಮಹ ಶ್ರೀ ಆದಿ ಶಂಕರಾಚಾರ್ಯರ ಜಯಂತಿಯನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಆಚರಿಸಲಾಯಿತು. ಕಾರ್ಯಕ್ರಮಕ್ಕೆ ತಾಲ್ಲೂಕು ಕಲ್ಯಾಣಾಧಿಕಾರಿ ಪಂಪಾಪತಿ, ವಿಸ್ತರಣಾಧಿಕಾರಿ ಅಹ್ಮದ್ ಸಾಬ್, ನಿಲಯ ಮೇಲ್ವಿಚಾರಕರಾದ ಅಂಜಿನಪ್ಪ ಹಾಗೂ ಇಲಾಖೆ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ದಿನಗೂಲಿಕಾರರು, ಅಲೆಮಾರಿಗಳಿಗೆ ಯುವಕರಿಂದ ಫುಡ್ ಕಿಟ್ ವಿತರಣೆ



ದಾವಣಗೆರೆ, ಮೇ 18- ಕೊರೊನಾ ಸಂಕಷ್ಟದ ಸ್ಥಿತಿಯಲ್ಲಿ ದಿನಗೂಲಿಕಾರರು ಮತ್ತು ಅಲೆಮಾರಿ ಜನರು ಅನುಭವಿಸುತ್ತಿರುವ ಕಷ್ಟಕ್ಕೆ ದೇವನಗರಿ ಫೌಂಡೇಶನ್ ಹೆಗಲಾಗಿ ಸೇವೆ ಮಾಡುತ್ತಿದೆ.

ಇಂಜಿನಿಯರಿಂಗ್ ಓದಿರುವ ಅನುಭವ ಮಂಟಪದ ಹಳೆಯ ವಿದ್ಯಾರ್ಥಿಗಳಾದ ಶಿವಾಸ್, ತೇಜಸ್ ಚನ್ನಪ್ಪ, ಋತ್ವಿಕ್‌ರೆಡ್ಡಿ, ತೇಜಸ್ ಶೆಟ್ಟಿ, (ಆಕರ್ಷ್ ಟಿ.ವಿ, ಮೊಬೈಲ್ ಮಾಲೀಕರು) ನೊಂದವರ ನೋವಿಗೆ ನೆರವಾಗಿ ಒಂದು ವಾರದಿಂದ ಸುಮಾರು 80 ಬಡ ಕುಟುಂಬಗಳಿಗೆ ತಾವೂ ಮತ್ತು ದಾನಿಗಳ ನೆರವಿನಿಂದ ಅಕ್ಕಿ, ಬೇಳೆ, ರವೆ, ಎಣ್ಣೆ, ಖಾರದಪುಡಿ ಮತ್ತಿತರೆ ಅಗತ್ಯ ವಸ್ತುಗಳ ಕಿಟ್ಟನ್ನು ಕಷ್ಟದಲ್ಲಿರುವ ಬಡವರಿಗೆ ಹಂಚುತ್ತಿದ್ದಾರೆ. ದಾನಿಗಳು ಮೊಬೈಲ್ 87470 99680, 97386 18686 ಕ್ಕೆ ಸಂಪರ್ಕಿಸುವುದು.

## ನಗರಕ್ಕೆ ನಾಳೆ ಆರೋಗ್ಯ ಸಚಿವ ಸುಧಾಕರ್

ದಾವಣಗೆರೆ,ಮೇ 18- ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಖಾತೆ ಸಚಿವ ಡಾ. ಕೆ. ಸುಧಾಕರ್ ಅವರುಗಳು ನಾಡಿದ್ದು ದಿನಾಂಕ 20ರ ಗುರುವಾರ ನಗರಕ್ಕೆ ಆಗಮಿಸಲಿದ್ದು, ಕೋವಿಡ್ ಕುರಿತಂತೆ ಆಸ್ಪತ್ರೆಗಳಿಗೆ ಭೇಟಿ ನೀಡುವರಲ್ಲದೇ, ಸಭೆ ನಡೆಸುವರು.

## ಗ್ರಾಮ ಗೆದ್ದರೆ ದೇಶ ಗೆದ್ದಂತೆ

**(1ನೇ ಪುಟದಿಂದ)** ಬೇರೆ ಜಿಲ್ಲೆಗಳಿಗೂ ಮಾದರಿಯಾಗಿ ಎಂದರು.

ದಿನದಿಂದ ದಿನಕ್ಕೆ ಕೊರೊನಾ ಸೋಂಕು ಕಡಿಮೆಯಾಗುತ್ತಿದೆ. ಇನ್ನೂ ಕಡಿಮೆ ಮಾಡಲು ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡುವ ಅಗತ್ಯ ವಿದೆ. ರಾಷ್ಟ್ರವನ್ನು ಸಂಕಷ್ಟದಿಂದ ಪಾರು ಮಾಡಲು ಪ್ರತಿಯೊಬ್ಬರು ಶ್ರಮಿಸಬೇಕು ಎಂದರು.

ಬೆಂಗಳೂರು ನಗರ, ಮೈಸೂರು, ಕೊಡಗು, ರಾಮನಗರ, ಹಾಸನ, ಬಳ್ಳಾರಿ, ಕೋಲಾರ, ಚಿಕ್ಕಬಳ್ಳಾಪುರ, ಮಂಡ್ಯ ಸೇರಿದಂತೆ 17 ಜಿಲ್ಲೆಗಳ ಆಡಳಿತದ ಜೊತೆ ಸಂವಾದ ಮಾಡಿದ ಪ್ರಧಾನಿಯವರು, ಕೆಲವು ಜಿಲ್ಲಾಧಿಕಾರಿಗಳಿಂದಲೂ ಮಾಹಿತಿ ಪಡೆದುಕೊಂಡರು.

ಇತ್ತ ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಉಪಮುಖ್ಯಮಂತ್ರಿ ಡಾ. ಅಶ್ವತ್ಥ್‌ನಾರಾಯಣ್, ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್, ಗೃಹ ಸಚಿವ ಬಸವರಾಜ್ ಬೊಮ್ಮಾಯಿ ಹಾಗೂ ಹಿರಿಯ ಅಧಿಕಾರಿಗಳು ಸಂವಾದದಲ್ಲಿ ಪಾಲ್ಗೊಂಡಿದ್ದರು.

## ಟೆಸ್ಟ್ ಮಾಡಿಸಿಕೊಳ್ಳಿ

**(1ನೇ ಪುಟದಿಂದ)** ತಲೆನೋವುಗಳಂತಹ ಲಕ್ಷಣಗಳು ಇರುವವರು ಕೂಡಲೇ ರ್‍ಯಾಪಿಡ್ ಟೆಸ್ಟ್ ಮಾಡಿಸಿಕೊಂಡು ಒಂದು ವೇಳೆ ಪಾಸಿಟಿವ್ ಬಂದರೆ ಕೂಡಲೇ ಕೋವಿಡ್ ಕೇರ್ ಸೆಂಟರ್ ಗಳಿಗೆ ದಾಖಲಾಗಬೇಕು. ಆ ಮೂಲಕ ಸೋಂಕಿನ ಕೊಂಡಿ ಮುರಿಯಲು ಜಿಲ್ಲಾಡಳಿತಕ್ಕೆ ಸಹಕಾರ ಮಾಡಬೇಕು

ಕೋವಿಡ್‌ನ ಲಕ್ಷಣಗಳಿದ್ದರೂ ಸ್ಥಳೀಯ ಔಷಧಿ ಅಂಗಡಿಗಳಲ್ಲಿ ಔಷಧಿ ತೆಗೆದುಕೊಂಡು ಗುಣಮುಖರಾಗದೇ ಸೋಂಕು ಶ್ವಾಸಕೋಶಕ್ಕೆ ತಗುಲಿ ಆಕ್ಸಿಜನ್ ಸ್ಯಾಚುರೇಷನ್ ಶೇಕಡ 80 ಕ್ಕಿಂತ ಕಡಿಮೆಯಾದರೆ ವೈದ್ಯರಿಗೆ ತಮ್ಮನ್ನು ಗುಣಪಡಿಸುವುದು ಸವಾಲಿನ ಕೆಲಸವಾಗಿದ್ದು ಗುಣಮುಖರಾಗುವ ಸಾಧ್ಯತೆ ಬಹಳ ಕಡಿಮೆ ಇರುತ್ತದೆ. ಹಾಗಾಗಿ ಸೋಂಕಿನ ಲಕ್ಷಣಗಳು ಕಂಡು ಬಂದವರು ಟೆಸ್ಟ್ ಮಾಡಿಸಿಕೊಂಡು ಪಾಸಿಟಿವ್ ಬಂದವರು ಐಸೋಲೇಷನ್ ಆಗುವ ಮೂಲಕ ತಮ್ಮನ್ನು, ತಮ್ಮವರನ್ನು ರಕ್ಷಣೆ ಮಾಡಿಕೊಳ್ಳುವ ಮೂಲಕ ಕುಟುಂಬದ ರಕ್ಷಣೆ ಮಾಡಿಕೊಳ್ಳಬೇಕೆಂದು ತಿಳಿಸಿದ್ದಾರೆ.

## ಸ್ಪುಟ್ನಿಕ್ ಸೇರ್ಪಡೆ

**(1ನೇ ಪುಟದಿಂದ)** ಪ್ರಾಯೋಗಿಕವಾಗಿ ಲಸಿಕೆ ನೀಡುವ ಪ್ರಕ್ರಿಯೆ ಆರಂಭಿಸಲಾಗಿದೆ. ಮಂಗಳವಾರ ವಿಶಾಖಪಟ್ಟಣದಲ್ಲಿರುವ ಡಾ. ರೆಡ್ಡೀಸ್ ಸಿಬ್ಬಂದಿಗೆ ಅಪೋಲೋ ಆಸ್ಪತ್ರೆಯು ಲಸಿಕೆ ನೀಡಿದೆ. ಶೀಘ್ರದಲ್ಲೇ ದೆಹಲಿ, ಮುಂಬೈ, ಬೆಂಗಳೂರು, ಅಹಮದಾಬಾದ್, ಚೆನ್ನೈ, ಕೊಲ್ಕೊತಾ ಹಾಗೂ ಪುಣೆಗಳಲ್ಲಿನ ಸಿಬ್ಬಂದಿ ಲಸಿಕೆ ಪಡೆಯಲಿದ್ದಾರೆ. ಸಾರ್ವಜನಿಕರು ಜೂನ್ ಮಧ್ಯಭಾಗದಲ್ಲಿ ಲಸಿಕೆ ಪಡೆಯಲು ಸಾಧ್ಯವಾಗಲಿದೆ.

ದೇಶದ 60ಕ್ಕೂ ಹೆಚ್ಚು ಕೇಂದ್ರಗಳಲ್ಲಿ ಅಪೋಲೋ ಹಾಸ್ಪಿಟಲ್ಸ್ ಸಂಸ್ಥೆಯು ಲಸಿಕೆ ನೀಡುತ್ತಿದೆ. ಖಾಸಗಿ ವಲಯದವರಿಗೆ ಲಸಿಕೆ ತೆರವುಗೊಳಿಸಿದ ನಂತರ ನಾವು ನಮ್ಮ ಜಾಲದ ಮೂಲಕ ಲಸಿಕೆ ನೀಡುವುದನ್ನು ಹೆಚ್ಚಿಸಿದ್ದೇವೆ ಎಂದಿದ್ದಾರೆ.

## ಕದಳಿ ವೇದಿಕೆಯಿಂದ 125ನೇ ಕಮ್ಮಟ



ದಾವಣಗೆರೆ, ಮೇ 18- ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಂಗ ಸಂಸ್ಥೆಯಾದ ಕದಳಿ ಮಹಿಳಾ ವೇದಿಕೆ, ತಾಲ್ಲೂಕು ಘಟಕದ ವತಿಯಿಂದ ವಾಟ್ಸಾಪ್ ಮೂಲಕ ಬಸವ ಜಯಂತಿ ಹಾಗೂ ವಿಶ್ವ ತಾಯಂದಿರ ದಿನಾಚರಣೆ ಆಚರಿಸಲಾಯಿತು.

ಅಧ್ಯಕ್ಷತೆಯನ್ನು ಕದಳಿ ವೇದಿಕೆ ತಾಲ್ಲೂಕು ಘಟಕದ ಅಧ್ಯಕ್ಷರಾದ ಕುಸುಮ ಲೋಕೇಶ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಅಂಬುಜ ಕೆ ಆಗಮಿಸಿ 'ವರ್ತಮಾನ ತಲ್ಲಣಗಳಲ್ಲಿ ತಾಯಂದಿರ ಪಾತ್ರ, ಬಸವ ವಚನಾಮೃತ' ವಿಷಯ ಕುರಿತು ಉಪನ್ಯಾಸ ನೀಡಿದರು. ಗೌರವಾಧ್ಯಕ್ಷರಾದ ಶಂಶಾದ್ ಬೇಗಮ್‌ರವರು ಉಪಸ್ಥಿತರಿದ್ದು, ವಚನ ಗಾಯನ ಪ್ರಸ್ತುತ ಪಡಿಸಿದರು.

ವಿಶ್ವ ತಾಯಂದಿರ ದಿನಾಚರಣೆ ಅಂಗವಾಗಿ ಶರಣರ ವೇಷಭೂಷಣ ಹಾಗೂ ವಚನ ವಾಚನ ಮತ್ತು ವಿಶ್ಲೇಷಣೆ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ವಿಜೇತರಾಗಿ ಗೀತ ಬಿ.ಜಿ. (ಪ್ರಥಮ), ಶೈಲಜ ಪಾಲಾಕ್ಷ (ದ್ವಿತೀಯ), ಚೆನ್ನಮಲ್ಲಿಕಾರ್ಜುನ (ತೃತೀಯ) ಬಹುಮಾನ ಪಡೆದರು. ವೀಣಾ ಜೆ ಮತ್ತು ಸುಶೀಲ ಬಸವರಾಜ್ ಸಮಾಧಾನಕರ ಬಹುಮಾನ ಹಾಗೂ ಗಿರಿಜಾ ಬಿಲ್ಲಳ್ಳಿ, ರೇಖಾ ಪ್ರಭು ಪ್ರೋತ್ಸಾಹದಾಯಕ ಬಹುಮಾನ ಪಡೆದರು.

ಕಾರ್ಯಕ್ರಮವನ್ನು ನಿರ್ಮಲ ಶಿವಕುಮಾರ್ ನಿರೂಪಿಸಿದರು. ಸದಸ್ಯೆ ಚಿನ್ನ ಮಲ್ಲಿಕಾರ್ಜುನ್ ಹಾಗೂ ಕು. ಭಾನು ಪ್ರಾರ್ಥಿಸಿದರು. ಚಂದ್ರಿಕ ಮಂಜುನಾಥ್ ಸ್ವಾಗತಿಸಿದರು, ವಿಜಯಲಕ್ಷ್ಮಿ ಬಸವರಾಜ್ ಅತಿಥಿಗಳನ್ನು ಪರಿಚಯಿಸಿದರು. ವಾಣಿ ರಾಜ್ ಸ್ಪರ್ಧೆಯ ಫಲಿತಾಂಶ ಪ್ರಕಟಿಸಿದರು.

## 270 ವೈದ್ಯರ ಸಾವು : ಐಎಂಎ

ನವದೆಹಲಿ, ಮೇ 18 – ಕೊರೊನಾ ಎರಡನೇ ಅಲೆಯ ಸೋಂಕಿನಿಂದಾಗಿ ದೇಶಾದ್ಯಂತ 270 ವೈದ್ಯರು ಇದುವರೆಗೂ ಸಾವನ್ನಪ್ಪಿರುವುದಾಗಿ ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ (ಐ.ಎಂ.ಎ.) ತಿಳಿಸಿದೆ.

ಐ.ಎಂ.ಎ. ಮಾಜಿ ಅಧ್ಯಕ್ಷ ಡಾ. ಕೆ.ಕೆ. ಅಗರ್‌ವಾಲ್ ಅವರು ನಿನ್ನೆ ಸೋಂಕಿನಿಂದ ಸಾವನ್ನಪ್ಪಿದ್ದರು. ಬಿಹಾರದಲ್ಲಿ ಅತಿ ಹೆಚ್ಚಿನ 78 ವೈದ್ಯರು ಸಾವನ್ನಪ್ಪಿದ್ದಾರೆ. ಉತ್ತರ ಪ್ರದೇಶದಲ್ಲಿ 37, ದೆಹಲಿಯ 29 ಹಾಗೂ ಆಂಧ್ರ ಪ್ರದೇಶದ 2 ವೈದ್ಯರು ಸಾವನ್ನಪ್ಪಿದ್ದಾರೆ ಎಂದು ಐ.ಎಂ.ಎ. ತಿಳಿಸಿದೆ.

ಮೊದಲ ಅಲೆಯಲ್ಲಿ 748 ವೈದ್ಯರು ದೇಶಾದ್ಯಂತ ಸಾವನ್ನಪ್ಪಿದ್ದರು. ಈ ಬಾರಿ ಅಲ್ಪ ಅವಧಿಯಲ್ಲೇ ನಾವು 270 ವೈದ್ಯರನ್ನು ಕಳೆದುಕೊಂಡಿದ್ದೇವೆ. ಎರಡನೇ ಅಲೆ ಎಲ್ಲರಿಗೂ, ವಿಶೇಷವಾಗಿ ಮುಂಚೂಣಿಯಲ್ಲಿ ಕಾರ್ಯ ನಿರ್ವಹಿಸುವ ಆರೋಗ್ಯ ಕಾರ್ಯಕರ್ತರಿಗೆ ಮಾರಣಾಂತಿಕವಾಗಿ ಪರಿಣಮಿಸಿದೆ ಎಂದು ಐ.ಎಂ.ಎ. ಅಧ್ಯಕ್ಷ ಡಾ. ಜೆ.ಎ. ಜಯಲಾಲ್ ಹೇಳಿದ್ದಾರೆ. ಕೊರೊನಾದಿಂದ ಸಾವಿರಕ್ಕೂ ಹೆಚ್ಚು ವೈದ್ಯರು ಸಾವನ್ನಪ್ಪಿದ್ದಾರೆ ಎಂದು ಐ.ಎಂ.ಎ. ಹೇಳುತ್ತಿದ್ದರೂ ಸಹ, ಸಾವಿನ ಸಂಖ್ಯೆ ಇನ್ನಷ್ಟು ಹೆಚ್ಚಿರುವ ಕಳವಳವಿದೆ. ದೇಶದಲ್ಲಿ 12 ಲಕ್ಷಕ್ಕೂ ಹೆಚ್ಚು ವೈದ್ಯರಿದ್ದಾರೆ.

## 594 ಜನರಿಗೆ ಪಾಸಿಟಿವ್, 4 ಸಾವು

**(1ನೇ ಪುಟದಿಂದ)** ಪಡೆಯುತ್ತಿದ್ದ ಕೊಗ್ಗನೂರು ಕ್ರಾಸ್‌ನ 51 ವರ್ಷದ ಪುರುಷ, ಶಿರಮಗೊಂಡನಹಳ್ಳಿಯ 43 ವರ್ಷದ ಪುರುಷ ಹಾಗೂ ಎಸ್.ಎಸ್.ಐ.ಎಂ.ಎಸ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವಿದ್ಯಾನಗರದ ವಾಸಿಗಳಾದ 63 ವರ್ಷದ ಮಹಿಳೆ ಹಾಗೂ 75 ವರ್ಷದ ಪುರುಷ ಸೋಂಕಿನಿಂದಾಗಿ ಮೃತಪಟ್ಟಿದ್ದಾರೆ.

## ಸಾಯಿಬಾಬಾ ಅಲೆಮಾರಿ ಸಮುದಾಯದವರಿಗೆ ಉಪಹಾರ



**ಹೊನ್ನಾಳಿ**

ಹೊನ್ನಾಳಿ, ಮೇ 18- ಪಟ್ಟಣದ ದೇವನಾಯ್ಕನಹಳ್ಳಿಯಲ್ಲಿ ವಾಸವಾಗಿರುವ ಮಹಾರಾಷ್ಟ್ರ ಮೂಲದ ಸಾಯಿಬಾಬಾ ಸಂಚಾರಿ ಅಲೆಮಾರಿ ಸಮುದಾಯದ ಜನರಿಗೆ ಎನ್‌ಎಸ್‌ಯುಐ ವಿದ್ಯಾರ್ಥಿ ಕಾಂಗ್ರೆಸ್ ಘಟಕದಿಂದ ಬಸವೇಶ್ವರ ಜಯಂತಿ ಹಾಗೂ ರಂಜಾನ್ ಹಬ್ಬದ ಅಂಗವಾಗಿ ಮಾಜಿ ಶಾಸಕ ಡಿ.ಜಿ. ಶಾಂತನಗೌಡ ನೇತೃತ್ವದಲ್ಲಿ ಮಧ್ಯಾಹ್ನದ ಉಪಹಾರವನ್ನು ವಿತರಿಸಲಾಯಿತು.

ಬಸವೇಶ್ವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಆಹಾರ ವಿತರಿಸಿ ಮಾತನಾಡಿದ ಶಾಂತನಗೌಡರು, ಬಸವಣ್ಣ ಮತ್ತು ಪೈಗಂಬರರು ಇಬ್ಬರ ಸಂದೇಶ ಒಂದೇ ಆಗಿದ್ದು, ದುಡಿದು ತಿನ್ನುವ ಉದ್ದೇಶ ಹೊಂದಿದ್ದರು. ಕಾಯಕವೇ ಕೈಲಾಸ ಮತ್ತು ದಾಸೋಹದ ಬಗ್ಗೆ ಈ ಇಬ್ಬರು ಮಹನೀಯರು ಅಪಾರ ನಂಬಿಕೆ ಇಟ್ಟಿದ್ದರು ಎಂದರು.

ಕೊರೊನಾದ ಈ ವಿಷಮ ಸಂದರ್ಭದಲ್ಲಿ ತಿಂಗಳುಗಳ ಕಾಲ ಲಾಕ್‌ಡೌನ್ ಆಗಿರುವುದರಿಂದ ಪಕ್ಷದ ಎನ್‌ಎಸ್‌ಯುಐ ಮತ್ತು ಯುವ ಕಾಂಗ್ರೆಸ್ ವತಿಯಿಂದ ಹಸಿದವರಿಗೆ ಅನ್ನ ನೀಡುವ ಕಾರ್ಯಕ್ರಮವನ್ನು ನಿರಂತರವಾಗಿ ಹಮ್ಮಿಕೊಂಡಿದ್ದೇವೆ ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಜಿ.ಪಂ.ಮಾಜಿ ಅಧ್ಯಕ್ಷ ಆರ್. ನಾಗಪ್ಪ, ಎನ್‌ಎಸ್‌ಯುಐ ರಾಜ್ಯ ವಕ್ತಾರ ದರ್ಶನ್ ಬಳ್ಳೇಶ್ವರ, ಯುವ ಕಾಂಗ್ರೆಸ್ ಅಧ್ಯಕ್ಷ ಪ್ರಶಾಂತ್ ಬಣ್ಣಜ್ಜಿ, ಎನ್‌ಎಸ್‌ಯುಐ ವಿದ್ಯಾರ್ಥಿ ಘಟಕದ ಅಧ್ಯಕ್ಷ ಮನೋಜ್ ಮದ್ಲಂಕಿ, ಉಪಾಧ್ಯಕ್ಷ ಶ್ರೀಧರ್‌ಗೌಡ, ಸಂಜಯ್, ಪ್ರದೀಪ್ ಬಡ್ಡಿ ಬಸವರಾಜು, ಅಬ್ದುಲ್ ಘನಿ ಮತ್ತು ಇತರರಿದ್ದರು.

## ವಿಪಕ್ಷ ನಾಯಕರ ಅಪಪ್ರಚಾರದ ರಾಜಕಾರಣ ಶೋಭೆ ತರುವುದಿಲ್ಲ



**ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್**

ದಾವಣಗೆರೆ, ಮೇ 18- ಸಣ್ಣ ಪುಟ್ಟ ವ್ಯತ್ಯಾಸಗಳಿದ್ದರೂ ಕೊರೊನಾ ನಿಭಾಯಿಸುವಲ್ಲಿ ಸರ್ಕಾರದ ಪ್ರಯತ್ನವನ್ನು ಅಲ್ಲಗಳೆಯುವಂತಿಲ್ಲ. ಆದರೆ ಕಾಂಗ್ರೆಸ್ ಸೇರಿದಂತೆ, ವಿಪಕ್ಷ ನಾಯಕರು ಅಪಪ್ರಚಾರದ ರಾಜಕಾರಣದಲ್ಲಿ ತೊಡಗಿ, ಜನರಲ್ಲಿ ಗೊಂದಲ ಮೂಡಿಸುವುದು ಶೋಭೆ ತರುವುದಿಲ್ಲ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ಆಕ್ಷೇಪಿಸಿದರು.

ಕೊರೊನಾದಂತಹ ರಾಷ್ಟ್ರೀಯ ವಿಪತ್ತಿನ ಸಂದರ್ಭದಲ್ಲಿ ಸರ್ಕಾರ ಕೊರೊನಾ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುತ್ತಿದೆ. ಲಸಿಕೆ ಕುರಿತಂತೆ ಅಪಪ್ರಚಾರ ಮಾಡಿದ ಕಾಂಗ್ರೆಸ್ ನಾಯಕರೇ ಎರಡು ಡೋಸ್ ತೆಗೆದುಕೊಂಡು ಸುರಕ್ಷಿತರಾಗಿದ್ದಾರೆ. ಈಗ ಲಸಿಕಾ ಕೇಂದ್ರಗಳ ಮುಂದೆ ಫೋಟೋ ತೆಗೆಸಿಕೊಂಡು ರಾಜಕೀಯ ಮಾಡುತ್ತಿದ್ದಾರೆ. ರೋಗಿಗಳಿಗೆ ಆತ್ಮಸ್ಥೈರ್ಯ ತುಂಬಬೇಕಿರುವ ಸಮಯದಲ್ಲಿ ಕೊರೊನಾ ವಾರಿಯರ್‌ಗಳನ್ನು ಅವಮಾನಿಸುವ ಕೆಲಸದಲ್ಲಿ ತೊಡಗಿದ್ದಾರೆ ಎಂದು ಪತ್ರಿಕಾಗೋಷ್ಠಿಯಲ್ಲಿ ಟೀಕಿಸಿದರು.

ಕೊರೊನಾ ನಿಯಂತ್ರಣದ ನಿಟ್ಟಿನಲ್ಲಿ ಜಿಲ್ಲಾಡಳಿತ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿದೆ. ಜಿಲ್ಲೆಯ ಸಂಸದರು, ಶಾಸಕರು ಸಹ ತಂತಮ್ಮ ವ್ಯಾಪ್ತಿಯಲ್ಲಿ ಉತ್ತಮ ಕಾರ್ಯ ಮಾಡುತ್ತಿದ್ದಾರೆ. ಆದರೆ ಕಾಂಗ್ರೆಸ್ಸಿಗರು ದಿನನಿತ್ಯ ಸುದ್ದಿಗೋಷ್ಠಿ ನಡೆಸಿ, ಟೀಕಿಸುವುದನ್ನೇ ಹವ್ಯಾಸ ಮಾಡಿಕೊಂಡಿದ್ದಾರೆ. ಸಂಕಷ್ಟದ ಸಂದರ್ಭದಲ್ಲಿ ವಿರೋಧ ಪಕ್ಷವಾಗಿ ಸಲಹೆ, ಮಾರ್ಗದರ್ಶನ ನೀಡಲಿ ಎಂದು ಹೇಳಿದರು.

ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್ ಮಾತನಾಡಿ, ಕೋವಿಡ್‌ನಿಂದ ದೇಶವೇ ಸಂಕಷ್ಟದಲ್ಲಿದೆ. ಹೀಗಿರುವಾಗ ರಾಜಕೀಯ ಮಾಡುವ ಸಮಯ ಇದಲ್ಲ. ಶೀಘ್ರವೇ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯ್ತಿ ಚುನಾವಣೆ ಎದುರಾಗಲಿದ್ದು, ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರು ತಮ್ಮ ಶಕ್ತಿ ಪ್ರದರ್ಶನ ಮಾಡಲಿ ಎಂದು ಸವಾಲು ಹಾಕಿದರು.

ಲಸಿಕೆ ತರಿಸಲು ಹಣ ಕೊಡುವುದಾಗಿ ದಾವಣಗೆರೆ ದಕ್ಷಿಣದ ಕಾಂಗ್ರೆಸ್ ಶಾಸಕರು ಹೇಳಿದ್ದು, ಕಳೆದ 25 ವರ್ಷ ಆ ಭಾಗವನ್ನು ಪ್ರತಿನಿಧಿಸುತ್ತಿರುವ ಡಾ. ಶಾಮನೂರು ಶಿವಶಂಕರಪ್ಪ ಅವರು, ಆ ಕ್ಷೇತ್ರದಲ್ಲಿ ಒಳ್ಳೆಯದೊಂದು ಆಸ್ಪತ್ರೆ ಕಟ್ಟಿಸಿಲ್ಲ. ತಮ್ಮ ಆಸ್ಪತ್ರೆಯನ್ನು ಕೋವಿಡ್ ಕೇರ್ ಸೆಂಟರ್‌ಗೆ ಕೇಳಿದರೂ ಜಿಲ್ಲಾಡಳಿತಕ್ಕೆ ಕೊಟ್ಟಿಲ್ಲ ಎಂದರು.

ಪತ್ರಿಕಾಗೋಷ್ಠಿಯಲ್ಲಿ ನಗರ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಪಕ್ಷದ ಮುಖಂಡರಾದ ಯಶವಂತರಾವ್ ಜಾಧವ್, ಡಿ.ಎಸ್. ಶಿವಶಂಕರ್, ಮಂಜಾನಾಯ್ಕ, ಹೆಚ್.ಪಿ. ವಿಶ್ವಾಸ್, ಪ್ರವೀಣ ಜಾಧವ್ ಇದ್ದರು.

## ಕೊರೊನಾದಿಂದ ಅನಾಥರಾದ ಮಕ್ಕಳಿಗೆ 'ಬಾಂಡ್' ನೆರವು

ಬೆಂಗಳೂರು, ಮೇ 18 - ಕೊರೊನಾ ಸೋಂಕಿನಿಂದ ತಂದೆ-ತಾಯಿಗಳನ್ನು ಕಳೆದುಕೊಂಡು ಅನಾಥವಾಗಿರುವ ಮಕ್ಕಳಿಗೆ ಭಾಗ್ಯಲಕ್ಷ್ಮಿ ಮಾದರಿಯಲ್ಲಿ ಬಾಂಡ್ ನೀಡುವ ಚಿಂತನೆ ಇದೆ ಎಂದು ಮಕ್ಕಳ ಕಲ್ಯಾಣ ಸಚಿವರಾದ ಶ್ರೀಮತಿ ಶಶಿಕಲಾ ಜೊಲ್ಲೆ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸಂಬಂಧ ಮುಖ್ಯಮಂತ್ರಿಗಳೊಟ್ಟಿಗೆ ಸಮಾಲೋಚನೆ ಮಾಡಿ, ತೀರ್ಮಾನ ಕೈಗೊಳ್ಳುವುದಾಗಿ ಹೇಳಿದರು.

ರಾಜ್ಯದಲ್ಲಿ ಕೊರೊನಾ ಎರಡನೇ ಅಲೆ ಹಿನ್ನೆಲೆಯಲ್ಲಿ ಪಾಲಕರ ಪೋಷಣೆ ಇಲ್ಲದೆ ಅನಾಥರಾದ ಮಕ್ಕಳಿಗೆ ಪುನರ್ವಸತಿ ಕಲ್ಪಿಸಲು ಸರ್ಕಾರ ಸಿದ್ದವಿದೆ. 18 ವರ್ಷದೊಳಗಿನ ಮಕ್ಕಳ ಕ್ವಾರಂಟೈನ್‌ಗಾಗಿ ಒಂದು ವಸತಿ ಶಾಲೆ ತೆರೆಯಲು ನಿರ್ಧರಿಸಲಾಗಿದೆ ಎಂದರು.

ಕೊರೊನಾದಿಂದ ಬಾಧಿತರಾದ ಮಕ್ಕಳನ್ನು ಗುರುತಿಸಲು ಹಾಗೂ ಪುನರ್ವಸತಿಗೆ ಸರ್ಕಾರ 1098 ಎಂಬ ಸಹಾಯವಾಣಿ ಆರಂಭಿಸಿದೆ. ಹಿರಿಯ ಐಎಎಸ್ ಅಧಿಕಾರಿ ಮೋಹನ್‌ರಾಜ್ ಅವರನ್ನು ನೋಡಲ್ ಅಧಿಕಾರಿಯಾಗಿ ನೇಮಿಸಲಾಗಿದ್ದು, ಇಂತಹ ಮಕ್ಕಳಿಗೆ ಕೌಟುಂಬಿಕ ವಾತಾವರಣ ಒದಗಿಸುವುದು ಸಚಿವೆಯಾಗಿ ನನ್ನ ಹಾಗೂ ನಮ್ಮ ಇಲಾಖೆ ಹಾಗೂ ನಮ್ಮ ಸರ್ಕಾರದ ಕರ್ತವ್ಯ ಎಂದರು.

ತಂದೆ-ತಾಯಿ ಕೊರೊನಾದಿಂದ ಮೃತರಾದರೆ, ತಂದೆ-ತಾಯಿ ಇಬ್ಬರೂ ಆಸ್ಪತ್ರೆಗೆ ದಾಖಲಾದರೆ, ಕೊರೊನಾದಿಂದ ಒಬ್ಬರು ಮೃತರಾಗಿ ಇನ್ನೊಬ್ಬರು ಆಸ್ಪತ್ರೆಗೆ ದಾಖಲಾದರೆ, ಒಬ್ಬರು ಮೃತರಾಗಿ ಇನ್ನೊಬ್ಬರು ಬೇರೆ ಪ್ರದೇಶದಲ್ಲಿ ವಾಸವಿರುವ ಕಾರಣಗಳಿಂದ ಮಕ್ಕಳು ಅನಾಥರಾದಾಗ ಅವರಿಗೆ ನಾವಿದ್ದೇವೆ ಎಂಬ ಭಾವನೆಯನ್ನು ಮೂಡಿಸಲು ಇಲಾಖೆ ಸಜ್ಜಾಗಿದೆ ಎಂದು ಹೇಳಿದರು.

6 ವರ್ಷದೊಳಗಿನ ಮಕ್ಕಳ ಆರೈಕೆಗೆ ವಿಶೇಷ ಕ್ವಾರಂಟೈನ್ ಸೌಲಭ್ಯ, ವಿಶೇಷ ದತ್ತು ಸಂಸ್ಥೆಗಳನ್ನು ಗೊತ್ತುಪಡಿಸುವುದು. 7 ರಿಂದ 18 ವರ್ಷದೊಳಗಿನ ಮಕ್ಕಳ ಆರೈಕೆಗೆ ವಿಶೇಷ ಕ್ವಾರಂಟೈನ್ ಸೌಲಭ್ಯ ಹಾಗೂ ಫಿಟ್ ಫೆಸಿಲಿಟಿಸ್ ಒದಗಿಸುವುದು. 18 ವರ್ಷದವರೆಗಿನ ಮಕ್ಕಳ ಕ್ವಾರಂಟೈನ್‌ಗಾಗಿ ರೆಸಿಡೆನ್ಸಿಯಲ್ ಮೀಸಲಿಡಲು ತೀರ್ಮಾನ ಮಾಡಲಾಗಿದೆ ಎಂದು ತಿಳಿಸಿದರು.

**ಕೊರೊನಾ ಸೋಂಕಿತ ಮಕ್ಕಳ ಚಿಕಿತ್ಸೆಗೆ ವಿಶೇಷ ಯೋಜನೆ :** ಯಾವುದೇ ಲಕ್ಷಣಗಳಿಲ್ಲದ ಕೊರೊನಾ ಪೀಡಿತ ಮಕ್ಕಳಿಗೆ ವಿಶೇಷ ಪಿಡಿಯಾಟ್ರಿಕ್ ಕೋವಿಡ್ ಕೇರ್ ಸೆಂಟರ್‌ಗಳಲ್ಲಿ ಚಿಕಿತ್ಸೆ ನೀಡಲು ಅನುಕೂಲವಾಗುವಂತೆ 30 ಜಿಲ್ಲೆಗಳಲ್ಲಿ ಪ್ರತ್ಯೇಕ ಕೋವಿಡ್ ಕೇರ್ ಸೆಂಟರ್ ಸ್ಥಾಪನೆ ಮಾಡಲಾಗುವುದು ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ.

ಅಂಗನವಾಡಿ ಫಲಾನುಭವಿಗಳಿಗೆ ಮನೆಮನೆಗೆ ತೆರಳಿ ವಿಶೇಷ ಪೌಷ್ಠಿಕ ಆಹಾರ ವಿತರಣೆ, ಅಂಗನವಾಡಿ ಮಕ್ಕಳು, ಗರ್ಭಿಣಿ, ಬಾಣಂತಿಯರ ಆರೋಗ್ಯದ ಮೇಲೆ ವಿಶೇಷ ನಿಗಾ ವಹಿಸಲಾಗುವುದು. ಕೊರೊನಾದಿಂದ ಸೋಂಕಿನಿಂದ ಮರಣ ಹೊಂದಿದ 12 ಅಂಗನವಾಡಿ ಕಾರ್ಯಕರ್ತೆಯರಿಗೆ 30 ಲಕ್ಷ ರೂಗಳ ಪರಿಹಾರ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗಿದೆ ಎಂದರು. 3ನೇ ಅಲೆಯು ಚಿಕ್ಕ ಮಕ್ಕಳಲ್ಲಿಯೇ ಹೆಚ್ಚಾಗಿ ಕಂಡುಬರುತ್ತದೆ ಎಂದು ತಜ್ಞರು ಎಚ್ಚರಿಸಿದ ಹಿನ್ನೆಲೆಯಲ್ಲಿ ಈಗಾಗಲೇ ನಮ್ಮ ಇಲಾಖೆ ಇದಕ್ಕೆ ಪೂರಕವಾದ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಸಚಿವರು ಹೇಳಿದರು.

## ಪತ್ರಿಕಾ ವಿತರಕರಿಗೆ ಕೋವಿಡ್ ಲಸಿಕೆ, ಆರೋಗ್ಯ ವಿಮೆ ನೀಡಲು ಆಗ್ರಹ

ದಾವಣಗೆರೆ, ಮೇ 18- ಕೊರೊನಾ ತಾಂಡವವಾಡುತ್ತಿರುವ ಹಿನ್ನೆಲೆಯಲ್ಲಿ ಆರಕ್ಷಕರು, ಡಾಕ್ಟರ್‌ಗಳು, ಆಶಾ ಕಾರ್ಯಕರ್ತರು, ಪತ್ರಕರ್ತರನ್ನು ಕೋವಿಡ್ ವಾರಿಯರ್ಸ್ ಎಂದು ರಾಜ್ಯ ಸರ್ಕಾರ ಗುರುತಿಸಿ, ಉಚಿತ ಲಸಿಕೆ ನೀಡುತ್ತಿದೆ. ಆದರೆ ದಿನ ಬೆಳ್ಳಂಬೆಳಿಗ್ಗೆ ಹಾಗೂ ಸಂಜೆಯ ವೇಳೆಯಲ್ಲಿ ಮನೆ-ಮನೆಗೆ ಸುದ್ದಿ ಮುಟ್ಟಿಸುವ ಕಾರ್ಯದಲ್ಲಿ ತೊಡಗಿರುವ ಪತ್ರಿಕಾ ವಿತರಕರಿಗೆ ಯಾವುದೇ ರೀತಿಯ ಸೌಲಭ್ಯ ನೀಡದೆ ರಾಜ್ಯ ಸರ್ಕಾರ ವಂಚಿಸಿದೆ ಎಂದು ನಗರದ ಹಿರಿಯ ಪತ್ರಿಕಾ ವಿತರಕ ಕೃಷ್ಣಮೂರ್ತಿ ಬೇಸರ ವ್ಯಕ್ತಪಡಿಸಿದ್ದಾರೆ.

ಪತ್ರಿಕಾ ವಿತರಕರು ಸಹ ಕೊರೊನಾ ಯೋಧರ ರೀತಿಯಲ್ಲೇ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. ಪತ್ರಿಕಾ ವಿತರಕರಿಗೂ ಸಹ ಉಚಿತ ಲಸಿಕೆ ಸಿಗುವಂತಾಗಬೇಕು. ವಾರಿಯರ್ಸ್‌ಗೆ ಸಿಗುವ ರೀತಿಯಲ್ಲೇ ಆರೋಗ್ಯ ವಿಮೆಯನ್ನು ಮಾಡಿಸಿಕೊಡಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಪತ್ರಿಕೆಗಳನ್ನು ಪ್ರತಿನಿತ್ಯ ಗ್ರಾಹಕರ ಮನೆ-ಮನೆಗೆ ತಲುಪಿಸುತ್ತಾ, ಅದರಿಂದ ಬರುವ ಅಲ್ಪಮಟ್ಟದ ಕಮೀಷನ್ ಹಣದಿಂದ ತಮ್ಮ ಕುಟುಂಬದ ನಿರ್ವಹಣೆಯ ಆದಾಯದ ಒಂದು ಭಾಗವನ್ನಾಗಿರಿಸಿಕೊಂಡು ಜೀವನ ಸಾಗಿಸುತ್ತಿದ್ದ ವಿತರಕರಿಗೆ ಏನಾದರು ಆದರೆ ಕುಟುಂಬದ ನಿರ್ವಹಣೆ ಮಾಡುವ ಆಧಾರಸ್ತಂಭವೇ ಇಲ್ಲದಂತಾಗುತ್ತದೆ ಎಂದು ಅವರು ಹೇಳಿದ್ದಾರೆ.

2018 ರಲ್ಲಿ ಸರ್ಕಾರವು ಬಜೆಟ್‌ನಲ್ಲಿ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿಗೆ 2 ಕೋಟಿ ಅನುದಾನ ಮಂಡಿಸಿತ್ತು. ಆದರೆ, ಅದು ಬಜೆಟ್‌ನಲ್ಲೇ ಉಳಿಯಿತೇ ಹೊರತು ಜಾರಿಗೆ ಬರಲಿಲ್ಲ. ಪತ್ರಿಕಾ ವಿತರಕರು ಹಲವು ಬಾರಿ ರಾಜ್ಯ ಸರ್ಕಾರಕ್ಕೆ ಪತ್ರಿಕಾ ವಿತರಕರನ್ನು ಅಸಂಘಟಿತ ಕಾರ್ಮಿಕ ವಲಯಕ್ಕೆ ಸೇರಿಸುವಂತೆ, ವಿಮಾ ಸೌಲಭ್ಯ (ನಿವೃತ್ತಿ ವೇತನ) ನೀಡುವಂತೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ ಎಂದು ಕೃಷ್ಣಮೂರ್ತಿ ವ್ಯಾಕುಲತೆ ವ್ಯಕ್ತಪಡಿಸಿದ್ದಾರೆ.




## ಭಾಗ್ಯವಂತರು.... !

ಏನಣ್ಣಾ ಒಂದೇ ದಿನಕ್ಕೆ ನಮ್ಮ ಜಿಲ್ಲೆಯಲ್ಲಿ ಕೊರೊನಾ ಕೇಸ್ ಸಾವಿರ ಸಂಖ್ಯೆ ದಾಟಿದೆ.

**ತಮ್ಮಾ ಈ ಪೊಲೀಸರಿಗೆ ದಿನಾ ಸುಮ್ಮ ಸುಮ್ಮನೆ ಓಡಾಡೋ ಜನರನ್ನು ಕಂಟ್ರೋಲ್ ಮಾಡಿ ಮಾಡಿ ಸಾಕಾಗಿತ್ತು. ಈಗ ಸೋಂಕು ತಗಲಿರೋ ಕೇಸು ದಿನಕ್ಕೆ ಸಾವಿರ ದಾಟಿದಂಗೆ, ಮೇಲೆ ಹೋಗೋ ಕೇಸು ದಿನಕ್ಕೆ ನೂರು ದಾಟಬೇಕು! ಆಗ ಪೊಲೀಸರು ನಿಟ್ಟುಸಿರು ಬಿಡ್ತಾರೆ. ಅವರೂ ಸ್ವಲ್ಪ ರೆಸ್ಟ್ ತಗೋಬಹುದು.**

ಅರೇ ಹಿಂಗೆ ಹೇಳಿದರೆ ಹೆಂಗೆ!? ಈ ಜನರ ಓಡಾಟ ಕಂಟ್ರೋಲ್ ಮಾಡೋದು ಯಾರು!?

**ಕೊರೊನಾ!**

ಹೌದು ನೋಡು! ಅದರ ಹೆದರಿಕೆಗೆ ಅರ್ಧ ಜನ ಸುಮ್ಮನೇ ಓಡಾಡೋದು ಕಡಿಮೆ ಮಾಡ್ತಾರೆ, ಅವರವರ ಮನೆಯಲ್ಲಿ ಇರ್ತಾರೆ. ಸುಮ್ಮನೇ ಹೊರಗೆ ಓಡಾಡೋರು ಕೊರೊನಾ ಅಂಟಿಸಿಕೊಳ್ತಾರೆ. ಗಟ್ಟಿ ಇದ್ದವರು ಬದುಕುತ್ತಾರೆ. ಇಲ್ಲದವರು ಮೇಲಕ್ಕೆ ರೈಟು ಹೇಳ್ತಾರೆ. ಹ್ಞೂಂ, ನಮ್ಮ ಭಾಗ್ಯದಲ್ಲಿ ಏನು ಬರೆದಿದೆಯೋ ಏನೋ?

**ಭಾಗ್ಯವಂತರು ನಾವು ಭಾಗ್ಯವಂತರು.....**

ಇದೇನಣ್ಣಾ ಭಾಗ್ಯವಂತರು ಹಾಡು ಹೇಳೋದಿಕ್ಕೆ ಶುರು ಮಾಡಿದ್ದೀಯಾ?

**ತಮ್ಮಾ ನಮ್ಮ ಹಿಂದಿನ ಹಾಗೂ ಇಂದಿನ ಮುಖ್ಯಮಂತ್ರಿಗಳು ಏನೇನು ಭಾಗ್ಯ ಕೊಟ್ರೋ ಅವುಗಳನ್ನು ನೆನೆಸಿಕೊಂಡು ಹಾಡ್ತಾ ಇದೀನಿ.**

ಅದೇ ಅನ್ನ ಭಾಗ್ಯ, ತಾಳಿ ಭಾಗ್ಯ, ಸೈಕಲ್ ಭಾಗ್ಯ...ಇವೇ ಹೌದಲ್ಲೋ?

**ಹೌದಪ್ಪಾ.**

ಅದು ನಿಜ. ನೀನು ಹಾಡ್ತಿರೋ ಭಾಗ್ಯವಂತರು ಹಾಡು ಸರಿಯಾಗಿದೆ.

**ನಿನಗೆ ಇವುಗಳಲ್ಲಿ ಯಾವ ಭಾಗ್ಯ ಹೆಚ್ಚು ಇಷ್ಟ?**

ಹೇ ಇವು ಯಾವ ಭಾಗ್ಯಗಳಿಂದ ನಮಗೆ ಏನು ಉಪಯೋಗವಿಲ್ಲ.

**ಮತ್ತೆ ಯಾವ ಭಾಗ್ಯ ಬೇಕಿತ್ತು?**

ಎಣ್ಣೇ ಭಾಗ್ಯ!

**ಥೂತ್! ಸದಾಶಿವನಿಗೆ ಯಾವಾಗಲೂ ಅದೇ ಧ್ಯಾನ ಅಂತಾರಲ್ಲ...**

ಹೌದೂ... ನಿನಗೆ ಯಾವ ಭಾಗ್ಯ ಇಷ್ಟ?

**ಈ ಕಷ್ಟದ ಸಮಯದಲ್ಲಿ ಎಲ್ಲರಿಗೂ ಒಂದೇ ಭಾಗ್ಯ ಬೇಕಾಗಿರೋದು. ಅದು ಯಾರೂ ಕೊಡುವಂತಹುದ್ದಲ್ಲ. ನಾವೇ ಸೃಷ್ಟಿಸಿಕೊಳ್ಳುವ ಭಾಗ್ಯ.**

ಯಾವ ಭಾಗ್ಯ?

**ಆರೋಗ್ಯವೇ ಭಾಗ್ಯ!!!**

# ದುಡಿಯುವ ಜನರಿಗೆ ವಿಶೇಷ ಆರ್ಥಿಕ ಪ್ಯಾಕೇಜ್ ಪ್ರಕಟಿಸಲಿ



## ಗ್ರಾಮೀಣ ಪ್ರದೇಶದಲ್ಲಿ ಸೋಂಕು ನಿಯಂತ್ರಿಸಲು ಜನರ ಸಹಕಾರ ಪಡೆದು, ನಾವೆಲ್ಲರೂ ಸೇರಿ ಶ್ರಮಿಸೋಣ : ಶಾಸಕ ರಾಮಪ್ಪ ಮನವಿ

ಮಲೇಬೆನ್ನೂರು, ಮೇ 18- ಕೊರೊನಾ ಸೋಂಕಿನಿಂದ ಆಗುತ್ತಿರುವ ಸಾವು-ನೋವುಗಳನ್ನು ತಡೆಗಟ್ಟಲು ಸರ್ಕಾರ ವಿಶೇಷ ಕಾಳಜಿ ವಹಿಸ ಬೇಕೆಂದು ಶಾಸಕ ಎಸ್. ರಾಮಪ್ಪ ಆಗ್ರಹಿಸಿದ್ದಾರೆ.

ಅವರು ಮಂಗಳವಾರ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದ ಆವರಣದಲ್ಲಿ 2 ಆಕ್ಸಿಜನ್ ಹೊಂದಿರುವ ತುರ್ತು ಸೇವಾ ವಾಹನವನ್ನು ಉದ್ಘಾಟಿಸಿ, ಪುರಸಭೆಯ ಕೌನ್ಸಿಲ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕೋವಿಡ್ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕೊರೊನಾ 2ನೇ ಅಲೆಯನ್ನು ನಿಯಂತ್ರಿಸಲು ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ನೇರ ಆರೋಪ ಮಾಡಿದ ಶಾಸಕರು, ಲಾಕ್‌ಡೌನ್‌ನಿಂದ ತೊಂದರೆ ಆಗಿರುವ ದುಡಿಯುವ ಜನರಿಗೆ ವಿಶೇಷ ಆರ್ಥಿಕ ಪ್ಯಾಕೇಜ್ ಪ್ರಕಟಿಸುವಂತೆ ಸರ್ಕಾರವನ್ನು ಒತ್ತಾಯಿಸಿದರು.

ಹರಿಹರ ನಗರದಿಂದ 3 ಜಿಲ್ಲೆಗಳಿಗೆ ಆಕ್ಸಿಜನ್ ಪೂರೈಕೆ ಆಗುತ್ತಿದ್ದರೂ ನಮಗೆ ಮಾತ್ರ ಸಮರ್ಪಕವಾಗಿ ಆಕ್ಸಿಜನ್ ಸಿಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಭತ್ತ ಖರೀದಿ ಆರಂಭಿಸಲು ಸರ್ಕಾರ ತಕ್ಷಣವೇ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ ಶಾಸಕರು, ಹರಿಹರ ತಾಲ್ಲೂಕಿನ ಜನರಿಗೆ ತುರ್ತು ಸೇವೆ ಒದಗಿಸುವುದಕ್ಕಾಗಿ 2 ಆಕ್ಸಿಜನ್ ಸಿಲಿಂಡರ್ ಹೊಂದಿರುವ 2 ಆಂಬ್ಯುಲೆನ್ಸ್‌ಗಳನ್ನು ಹರಿಹರ ಮತ್ತು ಮಲೇಬೆನ್ನೂರು ಭಾಗಕ್ಕೆ ನೀಡಿದ್ದೇವೆ ಎಂದು ಹೇಳಿದರು.

ಜನರಿಗೆ ಫುಡ್‌ಕಿಟ್‌ಗಿಂತ ಆಕ್ಸಿಜನ್ ಸೌಲಭ್ಯದ ಬೆಡ್‌ಗಳು ಅಗತ್ಯವಾಗಿವೆ. ಅದಕ್ಕಾಗಿ ಶಾಸಕರ ಅನುದಾನದಲ್ಲಿ 45 ಲಕ್ಷ ರೂ. ವೆಚ್ಚದಲ್ಲಿ ಹರಿಹರ ಆಸ್ಪತ್ರೆಗೆ ಮತ್ತು ಮಲೇಬೆನ್ನೂರಿನ ಸಮುದಾಯ ಆರೋಗ್ಯ ಕೇಂದ್ರಕ್ಕೆ 50 ಆಕ್ಸಿಜನ್ ಬೆಡ್ ವ್ಯವಸ್ಥೆ ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೇನೆಂದು ರಾಮಪ್ಪ ತಿಳಿಸಿದರು.

**ಟೆಸ್ಟ್‌ಗೆ ಒತ್ತು :** ಗ್ರಾಮೀಣ ಪ್ರದೇಶದ ಎಲ್ಲಾ ಹಳ್ಳಿಗಳಲ್ಲಿ ನಿರಂತರವಾಗಿ ಕೋವಿಡ್ ಟೆಸ್ಟ್ ಶಿಬಿರಗಳನ್ನು ಮಾಡಿ ಎಂದು ಆರೋಗ್ಯ ಇಲಾಖೆಗೆ ಸೂಚನೆ ನೀಡಿದ ಶಾಸಕರು, ಹರಿಹರ ನಗರದ ಜೊತೆಗೆ ಮಲೇಬೆನ್ನೂರು, ಭಾನುವಳ್ಳಿ, ಸಿರಿಗೆರೆ, ನಂದಿಗುಡಿ, ಕೊಕ್ಕನೂರು, ದೇವರಬೆಳಕೆರೆ, ಹಾಲಿವಾಣ, ಬನ್ನಿಕೋಡು, ಬೆಳ್ಳೂಡಿ, ಬಿಳಸನೂರು, ಕೊಂಡಜ್ಜಿ ಆರೋಗ್ಯ ಕೇಂದ್ರಗಳಲ್ಲಿ ಪ್ರತಿನಿತ್ಯ ಕನಿಷ್ಠ 100 ಜನರಿಗೆ ಕೋವಿಡ್ ಲಸಿಕೆ ಹಾಕುವ ವ್ಯವಸ್ಥೆ ಮಾಡುವಂತೆ ಜಿಲ್ಲಾಡಳಿತವನ್ನು ಒತ್ತಾಯಿಸಿದರು.

ಟಿಹೆಚ್‌ಓ ಡಾ. ಚಂದ್ರಮೋಹನ್ ಮಾತನಾಡಿ, ತಾಲ್ಲೂಕಿನಲ್ಲಿ ಸದ್ಯ 490 ಸಕ್ರಿಯ ಕೇಸ್‌ಗಳಿದ್ದು, ಕೋವಿಡ್ ಕೇರ್ ಸೆಂಟರ್‌ನಲ್ಲಿ 71, ಸಿ.ಜಿ. ಆಸ್ಪತ್ರೆಯಲ್ಲಿ 29, ಹರಿಹರ ಆಸ್ಪತ್ರೆಯಲ್ಲಿ 58, ಖಾಸಗಿ ಆಸ್ಪತ್ರೆಗಳಲ್ಲಿ 37, ಹೊರಗಡೆ - 30 ಮತ್ತು ಹೋಂ ಐಸೋಲೇಷನ್‌ನಲ್ಲಿ 270 ಸೋಂಕಿತರಿದ್ದಾರೆ. ಇದುವರೆಗೆ 40,645 ಜನರಿಗೆ ಕೋವಿಶಿಲ್ಡ್ ಹಾಗೂ 3676 ಜನರಿಗೆ ಕೋವ್ಯಾಕ್ಸಿನ್ ಲಸಿಕೆ ನೀಡಿದ್ದೇವೆ ಎಂದು ತಿಳಿಸಿದರು.

ಸಮುದಾಯ ಆರೋಗ್ಯ ಕೇಂದ್ರದ ವೈದ್ಯ ಡಾ. ನಿಸಾರ್ ಅವರು, ಈವರೆಗೂ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ 124 ಜನರಿಗೆ ಸೋಂಕು ದೃಢಪಟ್ಟಿದ್ದು, ಮೂವರು ಸಾವನ್ನಪ್ಪಿದ್ದಾರೆ.

100 ಸಕ್ರಿಯ ಕೇಸ್‌ಗಳಿದ್ದು, ಹರಿಹರ ಆಸ್ಪತ್ರೆಯಲ್ಲಿ 8, ಸಿಜಿ ಆಸ್ಪತ್ರೆಯಲ್ಲಿ 2, ಬೇರೆ ಜಿಲ್ಲೆಯಲ್ಲಿ 2, ಖಾಸಗಿ ಆಸ್ಪತ್ರೆಗಳಲ್ಲಿ 8 ಜನ ಚಿಕಿತ್ಸೆ ಪಡೆಯುತ್ತಿದ್ದು, ಉಳಿದವರೆಲ್ಲಾ ಹೋಂ ಕ್ವಾರಂಟೈನ್ ಆಗಿದ್ದಾರೆ. ಆರೋಗ್ಯ ಕೇಂದ್ರದಲ್ಲಿ ಇದುವರೆಗೆ 2675 ಜನರಿಗೆ ಮೊದಲ ಡೋಸ್ ಮತ್ತು 750 ಜನರಿಗೆ 2ನೇ ಡೋಸ್ ಲಸಿಕೆ ನೀಡಿದ್ದೇವೆ ಎಂಬ ಮಾಹಿತಿ ನೀಡಿದರು.

ಪುರಸಭೆ ಮುಖ್ಯಾಧಿಕಾರಿ ದಿನಕರ್ ಮಾತನಾಡಿ, ಪಟ್ಟಣದಲ್ಲಿ ಈವರೆಗೆ 56 ಜನರಿಗೆ ಪಾಸಿಟಿವ್ ಬಂದಿದೆ. 17 ಜನರು ಈಗಾಗಲೇ ಗುಣಮುಖರಾಗಿದ್ದಾರೆ. 35 ಸಕ್ರಿಯ ಕೇಸ್‌ಗಳಿದ್ದು, ಇಬ್ಬರು ಸೋಂಕಿನಿಂದ ಮೃತರಾಗಿದ್ದಾರೆ.

ಪುರಸಭೆ ಸದಸ್ಯರಾದ ಸುಬ್ಬಿರಾಮಪ್ಪ, ಮಹಾಂತೇಶ್ ಸ್ವಾಮಿ, ಹಕ್ಕೀಂ ಸಾಬ್, ತಾಲ್ಲೂಕು ಹಿರಿಯ ಆರೋಗ್ಯ ಸಹಾಯಕ ಎಂ.ಉಮ್ಮಣ್ಣ ಅವರುಗಳು ಮಾತನಾಡಿದರು. ಪೊಲೀಸ್ ಇಲಾಖೆಯಿಂದ ಕೈಗೊಂಡಿರುವ ಕ್ರಮಗಳ ಬಗ್ಗೆ ಪಿಎಸ್‌ಐ ವೀರಬಸಪ್ಪ ವಿವರಿಸಿದರು.

ಸಭೆಯ ಆರಂಭದಲ್ಲಿ ಮಾತನಾಡಿದ ಎಪಿಎಂಸಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್ ಅವರು, ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ಹಾಕುವ ವ್ಯವಸ್ಥೆ ಮಾಡುವಂತೆ ಮತ್ತು ಹೋಬಳಿಯಲ್ಲಿ ಭತ್ತ ಖರೀದಿ ಕೇಂದ್ರ ತೆರೆಯುವಂತೆ ಸರ್ಕಾರವನ್ನು ಒತ್ತಾಯಿಸಿದರು.

ಗ್ರಾಮ ಲೆಕ್ಕಾಧಿಕಾರಿಗಳಾದ ಶ್ರೀಧರಮೂರ್ತಿ, ಕೊಟ್ರೇಶ್ ಸುಭಾನಿ, ಆನಂದ ತೀರ್ಥ, ಬೋರಯ್ಯ, ಸೌಮ್ಯ, ದೇವರಾಜ್ ಅವರುಗಳು ತಮ್ಮ ವ್ಯಾಪ್ತಿಯಲ್ಲಿರುವ ಸೋಂಕಿತರ ಬಗ್ಗೆ ಸಭೆಗೆ ತಿಳಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ಉಪತಹಶೀಲ್ದಾರ್ ಆರ್.ರವಿ, ಕಂದಾಯ ನಿರೀಕ್ಷಕ ಆನಂದ್, ಪುರಸಭೆ ಅಧಿಕಾರಿಗಳಾದ ಉಮೇಶ್, ಪ್ರಭು, ಗುರುಪ್ರಸಾದ್, ನವೀನ್, ಪುರಸಭೆ ಸದಸ್ಯರಾದ ಎ.ಆರೀಫ್ ಅಲಿ, ದಾದಾವಲಿ, ಹೆಚ್.ಜಿ.ಮಂಜಪ್ಪ, ಮಾಸಣಗಿ ಶೇಖರಪ್ಪ, ಕೆ.ಜಿ.ಲೋಕೇಶ್, ಭೋವಿಕುಮಾರ್, ಎ.ಕೆ.ಲೋಕೇಶ್, ಫಕೃದ್ದೀನ್, ಆರೋಗ್ಯ ರಕ್ಷಾ ಸಮಿತಿ ಸದಸ್ಯ ಬಿ.ಮಂಜುನಾಥ್, ಮುಖಂಡ ಬಿ.ವೀರಯ್ಯ, ಕುಂಬಳೂರು ವಾಸು, ಪಿ.ಆರ್.ಕುಮಾರ್ ಮತ್ತಿತರರು ಸಭೆಯಲ್ಲಿದ್ದರು.

# ಕೊರೊನಾ : ಬ್ಯೂಟಿ ಪಾರ್ಲರ್ ಸಂಕಷ್ಟಕ್ಕೆ ಸ್ಪಂದಿಸಲು ಒತ್ತಾಯ



ದಾವಣಗೆರೆ, ಮೇ 18- ಕೊರೊನಾ ಹಿನ್ನೆಲೆಯಲ್ಲಿ ಆಗಿರುವ ಲಾಕ್ ಡೌನ್ ಪರಿಣಾಮ ಬ್ಯೂಟಿ ಪಾರ್ಲರ್ ನಡೆಸುವವರು ತೀವ್ರ ಸಂಕಷ್ಟಕ್ಕೀಡಾಗಿದ್ದಾರೆ ಎಂದು ಜಿಲ್ಲಾ ಬ್ಯೂಟಿ ಪಾರ್ಲರ್ ಅಸೋಸಿಯೇಷನ್ ಅಧ್ಯಕ್ಷರಾದ ಶ್ರೀಮತಿ ಕವಿತಾ ಚಂದ್ರಶೇಖರ್ ತಿಳಿಸಿದ್ದಾರೆ.

ಈ ಸಂಬಂಧ ಜನಪ್ರತಿನಿಧಿಗಳಿಗೆ, ಉನ್ನತ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ. ದಿನಸಿ ಕಿಟ್ ಹೊರತುಪಡಿಸಿದರೆ, ಇನ್ನಾವುದೇ ಸಹಾಯ ದೊರೆಯದಿರುವ ಬಗ್ಗೆ ಅವರು ಖೇದ ವ್ಯಕ್ತಪಡಿಸಿದ್ದಾರೆ.

ಕಳೆದ ವರ್ಷದ ಕೊರೊನಾ ಸಂದರ್ಭದಲ್ಲಿ ಬ್ಯೂಟಿ ಪಾರ್ಲರ್ ನಡೆಸುವವರು ಸಮಸ್ಯೆಗಳನ್ನು ಎದುರಿಸಿದ್ದಾರೆ. ಈಗ ಮತ್ತೊಮ್ಮೆ ಎರಡನೇ ಅಲೆಯು ಜೀವನ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಿದೆ.

ಶುಭ ಸಮಾರಂಭಗಳು ನಡೆಯಬೇಕಾದಂತಹ ಸಮಯದಲ್ಲಿ ಮತ್ತೆ ಲಾಕ್‌ಡೌನ್ ಆಗಿದೆ. ಈ ವೃತ್ತಿ ಪರಸ್ಪರ ಅಂತರ ಕಾಯ್ದುಕೊಂಡು ಮಾಡುವ ಕೆಲಸವಲ್ಲ. ಸರ್ಕಾರ ಈಗಲಾದರೂ ನೊಂದ ಮಹಿಳಾ ವೃತ್ತಿ ವೃಂದದವರ ಬಗ್ಗೆ ಗಮನಹರಿಸುವಂತೆ ಅವರು ಒತ್ತಾಯಿಸಿದ್ದಾರೆ.

# ಸ್ಯಾನಿಟೈಜೇಷನ್ ಮಾಡುತ್ತಾ ಯುವಜನಾಂಗಕ್ಕೆ ಮಾದರಿಯಾದ ಸೌಜನ್ಯ


ದಾವಣಗೆರೆ, ಮೇ 18- ಕೊರೊನಾ ಸೋಂಕು ಹೆಚ್ಚುತ್ತಿರುವ ಪ್ರಸ್ತುತ ದಿನಗಳಲ್ಲಿ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಮನೆಯಲ್ಲಿರುವವರೇ ಹೆಚ್ಚು.

ಆದರೆ ಅಲ್ಲಿ ಇಲ್ಲಿ ಕೆಲವರು ಸೋಂಕಿತರ ನೆರವಿಗೆ ಧಾವಿಸುತ್ತಿದ್ದಾರೆ. ಮತ್ತೆ ಕೆಲವರು ಸೋಂಕು ಮತ್ತಷ್ಟು ಹರಡದಂತೆ ಎಚ್ಚರಿಕೆ ವಹಿಸುವಲ್ಲಿ ಕಾರ್ಯನಿರತರಾಗಿದ್ದಾರೆ. ಈ ಸಾಲಿನಲ್ಲಿ ಇದೀಗ ಮತ್ತೊಬ್ಬ ಯುವತಿ ಸೇರ್ಪಡೆಯಾಗಿದ್ದಾರೆ.

'ನನ್ನದೊಂದು ಅಳಿಸು ಸೇವೆ ಮಾತ್ರ' ಎಂದು ವಿನಮ್ರವಾಗಿಯೇ ಹೇಳುತ್ತಾ ಕಳೆದ ಹತ್ತು ದಿನಗಳಿಂದ ನಗರದ ವಿವಿಧ ಭಾಗಗಳಲ್ಲಿ ಸ್ಯಾನಿಟೈಜೇಷನ್ ಮಾಡುತ್ತಾ ಯುವ ಜನತೆಗೆ ಮಾದರಿಯಾಗಿದ್ದಾರೆ ಅಜ್ಜಂಪುರ ಶೆಟ್ರು ಮನೆತನದ ಸೌಜನ್ಯ.

ಹೌದು, ತನ್ನ ಸ್ನೇಹಿತನ ಸಹೋದರ ರುದ್ರೇಶ್ ಹೆಗಲಿಗೆ ಟ್ಯಾಂಕ್ ಏರಿಸಿಕೊಂಡು ಸ್ಯಾನಿಟೈಸ್ ಮಾಡಲು ಶುರುವಿಟ್ಟಿದ್ದ. ಅದರಿಂದ ಪ್ರೇರೇಪಿತಳಾದ ಸೌಜನ್ಯ ಆತನೊಂದಿಗೆ ತಾನೂ ಸಹ ಹೆಜ್ಜೆ ಹಾಕುತ್ತಿದ್ದಾಳೆ.

ಸುಮಾರು 15 ಲೀಟರ್ ಸಾಮರ್ಥ್ಯದ ಕ್ಯಾನ್ ಹೆಗಲಿಗೇರಿಸಿಕೊಂಡು ಬೆಳಿಗ್ಗೆ 6.30ರಿಂದ 9.30ರವರೆಗೆ ಸುಮಾರು ಐದಾರು ಬಾರಿ ಭರ್ತಿ ಮಾಡಿಕೊಳ್ಳುತ್ತಾ ನಗರದ ಬೀದಿಗಳನ್ನು ಸುತ್ತಿ ಸ್ಯಾನಿಟೈಸ್ ಮಾಡುತ್ತಿದ್ದಾರೆ. ನನ್ನ ಕೆಲಸದಿಂದ ಕೊರೊನಾ ಓಡಿಸುತ್ತೇನೆಂಬ ಎಂಬ ಭ್ರಮೆ ಇಲ್ಲ. ಆದರೆ ಒಂದಿಷ್ಟಾದರೂ ಕಡಿಮೆಯಾಗಬಹುದು ಎಂಬ ವಿಶ್ವಾಸದಿಂದ ಈ ಕೆಲಸ ಮಾಡುತ್ತಿದ್ದೇನೆ ಎನ್ನುತ್ತಾರೆ ಸೌಜನ್ಯ.



ನನ್ನ ಕಾರ್ಯಕ್ಕೆ ತಾಯಿ ಶಿಲ್ಪ ಷಡಾಕ್ಷರಿ ಹಾಗೂ ತಂದೆ ಷಡಕ್ಷರಿ ಅಜ್ಜಂಪುರ ಶೆಟ್ರು ಉತ್ತೇಜನ ನೀಡಿದರು. ಹುಡುಗಿಯಾಗಿ ಇಂತಹ ಕೆಲಸ ಸಾಧ್ಯವಾ? ಎಂದು ಕೆಲ ಸ್ನೇಹಿತರು, ಸಂಬಂಧಿಕರು ಪ್ರಶ್ನಿಸಿದರು. ಮನಸ್ಸು ಮಾಡಿದರೆ ಅಸಾಧ್ಯವಾದುದು ಯಾವುದೂ ಇಲ್ಲ ಎನ್ನುವುದು ಸೌಜನ್ಯ ಮಾತು.

ಜನತೆ ಮುಂಜಾನೆ ಅಗತ್ಯ ವಸ್ತುಗಳು ಸಿಗುತ್ತದೋ ಇಲ್ಲವೋ ಎಂಬಂತೆ ಮುಗಿ ಬೀಳುತ್ತಿದ್ದಾರೆ. ಮಾಸ್ಕ್ ಧರಿಸದೆ, ಸಾಮಾಜಿಕ ಅಂತರ ಕಾಯ್ದುಕೊಳ್ಳದೆ ಸೋಂಕು ಹಚ್ಚಿಸಿಕೊಳ್ಳುತ್ತಿದ್ದಾರೆ.

ದಯಮಾಡಿ ಮಾಸ್ಕ್ ಧರಿಸಿ, ಸಾಮಾಜಿಕ ಅಂತರ ಕಾಯ್ದುಕೊಳ್ಳಿ. ಸಾಧ್ಯವಾದಷ್ಟೂ ಮನೆಯಲ್ಲಿರಿ ಎಂದು ಜನತೆಯಲ್ಲಿ ವಿನಂತಿಸಿ ಕೊಳ್ಳುವ ಸೌಜನ್ಯ, ಯುವ ಜನತೆ ಪ್ರಸ್ತುತ ದಿನಗಳಲ್ಲಿ ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಜೊತೆ ಸೇವಾ ಚಟುವ ಟಿಕೆಗಳಲ್ಲಿ ಪಾಲ್ಗೊಂಡರೆ ಉತ್ತಮ ಎಂದು ಅಭಿಪ್ರಾಯಿಸಿದರು.


ಸೌಜನ್ಯ

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಂತಿಮ ವರ್ಷದ ಬಿ.ಎಸ್ಸಿ. ಓದುತ್ತಿರುವ ಸೌಜನ್ಯ ಷಡಕ್ಷರಿ ಅಜ್ಜಂಪುರಶೆಟ್ರು, ಅವರು ಸಹೋದರಿ ಅನನ್ಯ ಸಹ ಇದೀಗ ಅಕ್ಕನ ಜೊತೆ ಹೆಜ್ಜೆ ಹಾಕುತ್ತಿದ್ದಾರೆ. ಅಕ್ಕನಿಗೆ ಸಹಾಯ ಮಾಡುತ್ತಿದ್ದಾಳೆ. ಈ ಮೂಲಕ ತನ್ನ ತಾಯಿಗೆ ಗಂಡು ಮಕ್ಕಳಿಲ್ಲ ಎಂಬ ಕೊರತೆಯನ್ನು ನೀಗಿಸುತ್ತಿದ್ದಾರೆ ಎನ್ನಬಹುದು.

ದಾವಣಗೆರೆ ನಗರಸಭೆಯ ಮಾಜಿ ಉಪಾಧ್ಯಕ್ಷರಾಗಿದ್ದ ಅಜ್ಜಂಪುರಶೆಟ್ರು ಸುಶೀಲಮ್ಮ ವರಸೆಯಲ್ಲಿ ಸೌಜನ್ಯಳಿಗೆ ಅಜ್ಜಿ. ಅಜ್ಜಂಪುರ ಶೆಟ್ರು ಮನೆತನ ತಮ್ಮ ಮನೆಯ ಹಿರಿಯರ ಹೆಸರಿನಲ್ಲಿ ಟ್ರಸ್ಟ್ ಸ್ಥಾಪಿಸಿಕೊಂಡು ಅನೇಕ ಜನಪರ ಕಾರ್ಯಗಳನ್ನು ಮಾಡುತ್ತಿದೆ. ಕಳೆದ ವರ್ಷ ಕೊರೊನಾ ಮಹಾಮಾರಿ ಅಪ್ಪಳಿಸಿದಾಗ ತಮ್ಮ ಟ್ರಸ್ಟ್ ವತಿಯಿಂದ ಅಶಕ್ತರಿಗೆ ಆಹಾರ ಧಾನ್ಯಗಳ ಕಿಟ್ ಗಳೊಂದಿಗೆ ಒಂದಿಷ್ಟು ಧನ ಸಹಾಯ ಮಾಡಿದ್ದರು. ಇಂತಹ ಹಿನ್ನೆಲೆ ಮತ್ತು ಮನೆಯಲ್ಲಿನ ಶರಣ ಪರಂಪರೆಯ ವಾತಾವರಣಲ್ಲಿ ಬೆಳೆದ ಸೌಜನ್ಯ ಯುವ ಜನಾಂಗಕ್ಕೆ ಮಾದರಿ ಎನ್ನಬಹುದು.

# 18 ವರ್ಷದೊಳಗಿನವರ ಮೇಲೆ ಕೋವ್ಯಾಕ್ಸಿನ್ ಪರೀಕ್ಷೆ

**10-12 ದಿನಗಳಲ್ಲಿ ಪರೀಕ್ಷೆಗಾಗಿ ಕೇಂದ್ರದ ಅನುಮತಿ**

ನವದೆಹಲಿ, ಮೇ 18 – ದೇಶೀವಾಗಿ ರೂಪಿಸಲಾಗಿರುವ ಕೋವ್ಯಾಕ್ಸಿನ್ ಲಸಿಕೆಯ ಎರಡರಿಂದ 18 ವರ್ಷದೊಳಗಿನವರ ಮೇಲಿನ ಎರಡು ಹಾಗೂ ಮೂರನೇ ಹಂತದ ವೈದ್ಯಕೀಯ ಪ್ರಯೋಗ ಮುಂದಿನ 10-12 ದಿನಗಳಲ್ಲಿ ನಡೆಯಲಿದೆ ಎಂದು ನೀತಿ ಆಯೋಗದ ಹಿರಿಯ ಸದಸ್ಯ ವಿ.ಕೆ. ಪೌಲ್ ತಿಳಿಸಿದ್ದಾರೆ.

ಮೇ 13ರಂದು ಈ ವಯೋಮಾನದವರ ಮೇಲೆ ಲಸಿಕೆ ಪ್ರಯೋಗ ನಡೆಸಲು ಅನುಮತಿ ನೀಡಲಾಗಿದೆ. ಹಲವು ರಾಜ್ಯಗಳ 525 ಮಕ್ಕಳ ಮೇಲೆ ಪ್ರಯೋಗ ನಡೆಯಲಿದೆ. ಬಹುತೇಕ ದೇಶಗಳು ಮಕ್ಕಳ ಮೇಲೆ ಲಸಿಕೆ ಪ್ರಯೋಗಕ್ಕೆ ಇನ್ನೂ ಅನುಮತಿ ನೀಡಿಲ್ಲ. ಕಳೆದ ವಾರ 12ರಿಂದ 15 ವರ್ಷದವರ ಮೇಲೆ ಫೈಜರ್ ಹಾಗೂ ಬಯಾನ್‌ಟೆಕ್ ಲಸಿಕೆಗಳ ಪ್ರಯೋಗಕ್ಕೆ ಅಮೆರಿಕ ಒಪ್ಪಿಗೆ ನೀಡಿತ್ತು. ಕೆನಡಾ ಸಹ 12 ವರ್ಷದವರ ಮೇಲೆ ಲಸಿಕಾ ಪ್ರಯೋಗಕ್ಕೆ ಅನುಮತಿ ನೀಡಿದೆ.

# ಗೋಶಾಲೆಗೆ ಹುಲ್ಲು ದಾನಕ್ಕೆ ಕರೆ



ದಾವಣಗೆರೆ, ಮೇ 18- ಆವರಗೆರೆ ಬಳಿಯ ಶ್ರೀ ಭಗವಾನ್ ಮಹಾವೀರ್ ಗೋಶಾಲೆಯಲ್ಲಿ 540 ಹಸು ಮತ್ತು ಕರುಗಳನ್ನು ಸಾಕಲಾಗುತ್ತಿದ್ದು, ರೈತ ಬಾಂಧವರು ತಮ್ಮ ಕೈಲಾದಷ್ಟು ಮೇವು (ಹುಲ್ಲು) ಪೆಂಡಿಗಳನ್ನು ದಾನ ಮಾಡುವುದರ ಮೂಲಕ ಸಾರ್ಥಕ ಸೇವೆ ಸಲ್ಲಿಸುವಂತೆ ವಿನಂತಿಸಲಾಗಿದೆ.

ಪ್ರಾಣಿದಯಾ ಜ್ಞಾನ ಪ್ರಸಾರಕ ಸಂಘದಿಂದ ನಡೆಯುತ್ತಿರುವ ಈ ಗೋಶಾಲೆಗೆ ಈಗಾಗಲೇ ಅನೇಕ ಜನರು, ರೈತರು ಮೇವನ್ನು ದಾನ ಮಾಡುತ್ತಿದ್ದಾರೆ. ದಾನಿಗಳು ಗೋಶಾಲೆಗೆ ಹುಲ್ಲನ್ನು ನೀಡುವುದರೊಂದಿಗೆ ಹಸು ಮತ್ತು ಕರುಗಳ ರಕ್ಷಣೆಗೆ ಸಹಕರಿಸುವಂತೆ ಗೋಶಾಲೆಯ ಜಿತೇಂದ್ರ ಜೈನ್ (94485-16033), ದಿನೇಶ್ ಜೈನ್ (99803-39333) ಕೋರಿದ್ದಾರೆ.



**ಲಸಿಕಾ ಕೇಂದ್ರದ ಬಳಿ ಲಸಿಕೆಗೆ ಕಾಯುತ್ತಿರುವ ನಾಗರಿಕರು**

**ದಾವಣಗೆರೆ ಜಿಲ್ಲಾ ಚಿಗಟೇರಿ ಆಸ್ಪತ್ರೆಯ ಕೋವಿಡ್ ಲಸಿಕಾ ಕೇಂದ್ರದ ಬಳಿ ಲಸಿಕೆ ಹಾಕಿಸಿಕೊಳ್ಳುವವರು ಬೆಳಿಗ್ಗೆಯಿಂದಲೇ ಕಾದು ಕಾದು ಸಾಕಾಗಿ ಕುಳಿತುಕೊಂಡೇ ಸರದಿಗಾಗಿ ಕಾಯುತ್ತಿದ್ದರು.**

## ಬ್ರಿಟನ್ ಕೋರ್ಟ್‌ನಲ್ಲಿ ಮಲ್ಯಗೆ ಹಿನ್ನಡೆ

ಲಂಡನ್, ಮೇ 18-ಎಸ್.ಬಿ.ಐ. ನೇತೃತ್ವದ ಬ್ಯಾಂಕುಗಳ ಒಕ್ಕೂಟ ದಾಖಲಿಸಿರುವ ದಿವಾಳಿ ಅರ್ಜಿಯಲ್ಲಿ ಬದಲಾವಣೆ ತರಬೇಕು ಎಂದು ಮದ್ಯೋದ್ಯಮಿ ವಿಜಯ್ ಮಲ್ಯ ದಾಖ ಲಿಸಿದ್ದ ಅರ್ಜಿಯನ್ನು ಬ್ರಿಟನ್ ನ್ಯಾಯಾಲಯ ತಳ್ಳಿ ಹಾಕಿದೆ. ಬ್ಯಾಂಕುಗಳ ಪರವಾಗಿ ಆದೇಶ ಹೊರಡಿಸಿರುವ ನ್ಯಾಯಾಲಯ, ದಿವಾಳಿ ಪ್ರಕ್ರಿಯೆ ನಡೆಯುವಾಗ ಬ್ಯಾಂಕುಗಳು ತಾವು ಬಯ ಸುವ ಯಾವುದೇ ಭದ್ರತೆಯನ್ನು ಜಾರಿಗೆ ತರಬಹುದು ಇಲ್ಲವೇ ಕೈ ಬಿಡಬಹುದು ಎಂದು ತಿಳಿಸಿದೆ.

# ರಾಜೀವ್ ತಾರಾನಾಥ್, ಕಸ್ತೂರಿ ರಂಗನ್‌ಗೆ 'ಬಸವಶ್ರೀ' ಪ್ರಶಸ್ತಿ





ಚಿತ್ರದುರ್ಗ, ಮೇ 18- ಮುರುಘಾ ಮಠ ಕೊಡಮಾಡುವ 2019ನೇ ಸಾಲಿನ ಬಸವಶ್ರೀ ಪ್ರಶಸ್ತಿಗೆ ಖ್ಯಾತ ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ್ ಹಾಗೂ 2020 ನೇ ಸಾಲಿನ ಬಸವಶ್ರೀ ಪ್ರಶಸ್ತಿಗೆ ಇಸ್ರೋ ಮಾಜಿ ಅಧ್ಯಕ್ಷ, ಹೆಸರಾಂತ ವಿಜ್ಞಾನಿ ಡಾ. ಕೆ. ಕಸ್ತೂರಿ ರಂಗನ್ ಅವರು ಭಾಜನರಾಗಿದ್ದಾರೆ. ಪ್ರಶಸ್ತಿಯು ಐದು ಲಕ್ಷ ನಗದು, ಪಾರಿತೋಷಕ, ಪ್ರಶಸ್ತಿ ಪತ್ರ ಒಳಗೊಂಡಿದೆ. ಕೊರೊನಾ ಹಿನ್ನೆಲೆಯಲ್ಲಿ ಲಾಕ್‌ಡೌನ್ ಇರುವುದರಿಂದ ಮುಂದಿನ ತಿಂಗಳಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಶುಕ್ರವಾರ ಸುದ್ದಿಗಾರರಿಗೆ ಡಾ. ಶಿವಮೂರ್ತಿ ಮುರುಘಾ ಶರಣರು ತಿಳಿಸಿದರು.

**ಪಂಡಿತ್ ರಾಜೀವ್ ತಾರಾನಾಥ್ ಪರಿಚಯ :** ಅಂತರರಾಷ್ಟ್ರೀಯ ಖ್ಯಾತಿಯ ರಾಜೀವ್ ತಾರಾನಾಥ್ ಜಗತ್ತಿನ ಅತ್ಯಂತ ಉತ್ಕೃಷ್ಟ ಸರೋದ್ ವಾದಕರಲ್ಲಿ ಅಗ್ರಗಣ್ಯರು. ಉಸ್ತಾದ್ ಅಲಿ ಅಕ್ಬರ್ ಖಾನ್ ಅವರ ಶಿಷ್ಯರಾಗಿದ್ದ ಅವರು ಸಾಂಪ್ರದಾಯಿಕ ಹಿಂದೂಸ್ತಾನಿ ಸಂಗೀತ ದಲ್ಲಿನ ಆಳ ಹಾಗೂ ಭಾವನಾ ಲೋಕದ ತೀಕ್ಷ್ಣತೆಯನ್ನು ತಮ್ಮ ವಾದನದಲ್ಲಿ ಸಮ್ಮಿಶ್ರಗೊಳಿಸುವ ಸಾಧಕರಾಗಿದ್ದಾರೆ.

**ಡಾ. ಕೆ. ಕಸ್ತೂರಿ ರಂಗನ್ ಪರಿಚಯ :** ಡಾ. ಕೃಷ್ಣಸ್ವಾಮಿ ಕಸ್ತೂರಿ ರಂಗನ್ ಅವರು ಬಾಹ್ಯಾಕಾಶ ಖ್ಯಾತ ವಿಜ್ಞಾನಿಯಾಗಿದ್ದು, 2003 ರವರೆಗೆ 9 ಕ್ಕೂ ಹೆಚ್ಚು ವರ್ಷಗಳ ಕಾಲ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ)ಯ ನೇತೃತ್ವ ವಹಿಸಿದ್ದರು. ಇವರು ರಾಜ್ಯಸಭಾ ಸದಸ್ಯರಾಗಿದ್ದರು. ಭಾರತ ಸರ್ಕಾರದ ಯೋಜನಾ ಆಯೋಗದ ಸದಸ್ಯರಾಗಿದ್ದಾರೆ.

## ನದಿಯಲ್ಲಿ ಪತ್ತೆಯಾದ ಮೃತದೇಹಗಳನ್ನು ಸುಟ್ಟವರ ಅಮಾನತ್ತು

ಬಲಿಯಾ (ಉತ್ತರ ಪ್ರದೇಶ), ಮೇ 18 – ಗಂಗಾನದಿಯಲ್ಲಿ ಪತ್ತೆಯಾಗಿದ್ದ ಮೃತದೇಹ ಗಳನ್ನು ಟೈರ್ ಹಾಗೂ ಪೆಟ್ರೋಲ್‌ಗಳಿಂದ ಸುಟ್ಟ ಆರೋಪದ ಮೇಲೆ ಐವರು ಪೊಲೀಸರನ್ನು ಅಮಾನತ್ತುಗೊಳಿಸಿದ ಘಟನೆ ನಡೆದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.


## ದಾವಣಗೆರೆ ದಿನೇಶ್ ಬೀಡಿ ಮಾಲೀಕರಾದ ಅಲ್‌ಹಾಜ್ ಯು.ಎಂ. ಅಬ್ದುಲ್ ಸಾಬ್ ನಿಧನ



ದಾವಣಗೆರೆ ದಿನೇಶ್ ಬೀಡಿ ಮಾಲೀಕರಾದ **ಅಲ್‌ಹಾಜ್ ಯು.ಎಂ. ಅಬ್ದುಲ್ ಸಾಬ್** ಅವರು ದಿನಾಂಕ 18.05.2021ರ ಮಂಗಳವಾರ ಮಧ್ಯಾಹ್ನ 2 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 69 ವರ್ಷ ವಯಸ್ಸಾಗಿತ್ತು. ಅಬ್ದುಲ್ ಸಾಬ್, ದಾವಣಗೆರೆ ಜಿಲ್ಲಾ ಜೆಡಿಎಸ್ ಅಲ್ಪಸಂಖ್ಯಾತರ ವಿಭಾಗದ ಅಧ್ಯಕ್ಷರಾದ ಯು.ಎಂ. ಮನ್ಸೂರ್ ಅಲಿ ಅವರ ತಂದೆ. ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 19.05.2021ರ ಬುಧವಾರ ಮುಂಜಾನೆ 7.30 ಕ್ಕೆ ದಾವಣಗೆರೆ ನಗರದ ಪಿ.ಬಿ. ರಸ್ತೆಯಲ್ಲಿರುವ ಈದ್ಗಾ ಖಬರ್‌ಸ್ತಾನದಲ್ಲಿ ನೆರವೇರಿಸಲಾಗುವುದು.

- ದುಃಖತಪ್ತ ಕುಟುಂಬ ವರ್ಗ

## ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀಮತಿ ಗಿರಿಯಳ್ಳರ ಲಲಿತಮ್ಮ**
ಶಾಮನೂರಿನ ದಿ|| ಗಿರಿಯಳ್ಳರ ಮುರಿಗೆಪ್ಪನವರ ಧರ್ಮಪತ್ನಿ
ನಿಧನ : 18.05.2021



**ಶ್ರೀ ಎಂ.ಟಿ. ಬಸವನಗೌಡ**
ದಾವಣಗೆರೆ ಜಿ.ಪಂ. ಮಾಜಿ ಸದಸ್ಯರು, ಬಸವೇಶ್ವರ ಮತ್ತು ನಂದಿ ಸ್ಟೋನ್ ಕ್ರಷರ್ ಮಾಲೀಕರು, ಬೇವಿನಹಳ್ಳಿ.
ನಿಧನ : 15.05.2021

ಇವರುಗಳ ನಿಧನಕ್ಕೆ ಭಾವಪೂರ್ಣ ಶ್ರದ್ಧಾಂಜಲಿ ಕೋರುತ್ತಾ, ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥನೆ.

**ಶ್ರೀಮತಿ ಶಾಂತಮ್ಮ ಮತ್ತು ಶ್ರೀ ಸಂಕೋಳ್ ಶಿವಪ್ಪ ಹಾಗೂ ಮಕ್ಕಳು, ಶಾಮನೂರು.**


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte